# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಆಗಸ್ಟ್ 12, 2021

ಸಂಪುಟ : 48 ಸಂಚಿಕೆ : 90 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ನಗರದಲ್ಲಿ ಯುವ ಕಾಂಗ್ರೆಸ್ ಮುಖಂಡನ ಭೀಕರ ಹತ್ಯೆ

ದಾವಣಗೆರೆ, ಆ.11- ಸಾರ್ವಜನಿಕ ಸ್ಥಳದಲ್ಲೇ ತಲೆಯ ಮೇಲೆ ದೊಡ್ಡ ಸೈಜು ಕಲ್ಲು ಎತ್ತಿ ಹಾಕಿ ಕಾಂಗ್ರೆಸ್ ಮುಖಂಡನನ್ನು ದುಷ್ಕರ್ಮಿಗಳು ಕೊಲೆ ಮಾಡಿರುವ ಘಟನೆ ಇಲ್ಲಿನ ಬಸವರಾಜ ಪೇಟೆಯ ಹುಬ್ಬಳ್ಳಿ ಚೌಡಪ್ಪನ ಗಲ್ಲಿ ಹತ್ತಿರ ಇಂದು ರಾತ್ರಿ 8.30 ರ ಸಮಯದಲ್ಲಿ ನಡೆದಿದೆ.




ಬಸವರಾಜ ಪೇಟೆ ವಾಸಿ ಎನ್. ಪರಮೇಶ್ (ಸೀಮೆಣ್ಣೆ) ಕೊಲೆಯಾದ ಕಾಂಗ್ರೆಸ್ ಮುಖಂಡ. ಪರಮೇಶ್ ಅವರಿಗೆ ಸುಮಾರು 52 ವರ್ಷ ವಯಸ್ಸಾಗಿತ್ತು. ಪರಮೇಶ್, ನಗರಸಭೆ ಮಾಜಿ ಸದಸ್ಯರೂ ಆದ ಕಾಂಗ್ರೆಸ್ ಮುಖಂಡ ಬಿ.ಹೆಚ್. ಮಲ್ಲೇಶಪ್ಪ (ಸೀಮೆಎಣ್ಣೆ) ಅವರ ಅಳಿಯ.

ತನ್ನ ಮನೆಯ ಸಮೀಪದಲ್ಲೇ ಇರುವ ಪರಿಚಯಸ್ಥರ ಮನೆಗೆ ಹೋಗಿದ್ದ ಪರಮೇಶ್ ವಾಪಾಸ್ ಆ ಮನೆಯಿಂದ ಹೊರಗೆ ಬಂದು ತಮ್ಮ ಮೋಟಾರ್ ಬೈಕ್ ಚಾಲನೆ ಮಾಡುವ ಸಂದರ್ಭದಲ್ಲಿ ಹೊಂಚು ಹಾಕಿ ಕುಳಿತಿದ್ದ ಮೂವರು ದುಷ್ಕರ್ಮಿಗಳು (4ನೇ ಪುಟಕ್ಕೆ)

## ರಾಜ್ಯಾದ್ಯಂತ 560 ಮಕ್ಕಳಲ್ಲಿ ಸೋಂಕು

ಬೆಂಗಳೂರು, ಆ. 11 - ಕೊರೊನಾ ಸೋಂಕು ರಾಜ್ಯದಲ್ಲಿ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದ್ದರೂ, ಮಕ್ಕಳಲ್ಲಿ ಹೆಚ್ಚು ಸೋಂಕು ಕಾಣಿಸಿಕೊಳ್ಳುತ್ತಿದೆ. ಕಳೆದ ಒಂದು ವಾರದಲ್ಲಿ ರಾಜ್ಯಾದ್ಯಂತ 560 ಮಕ್ಕಳಲ್ಲಿ ಸೋಂಕು ಕಾಣಿಸಿಕೊಂಡಿ ರುವುದು ಆತಂಕಕ್ಕೆ ಎಡೆಮಾಡಿದೆ.

ಇದು 3ನೇ ಅಲೆಯ ಮುನ್ಸೂಚನೆ ಎಂಬುದು ಕಾಣುತ್ತಿದೆ. ಕೇರಳ, ಮಹಾರಾಷ್ಟ್ರ ಗಡಿ ಭಾಗದ ಜಿಲ್ಲೆಗಳಲ್ಲಿ ಸೋಂಕು ಸ್ವಲ್ಪ ಏರುಗತಿ ಕಂಡಿದ್ದರೂ ಉಳಿದೆಡೆ ಸೋಂಕು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಆದರೆ ಸೋಂಕು ಮಕ್ಕಳಲ್ಲಿ ಕಾಣಿಸುತ್ತಿರುವುದು ನಾಗರಿಕರಲ್ಲಿ ದಿಗ್ಭ್ರಾಂತಿ ಮೂಡಿಸಿದೆ.





### ಬ್ಲ್ಯಾಕ್ ಲ್ಯಾಬರ್‌ಡಾರ್ (ಫಿಮೇಲ್) ನಾಯಿ ಕಳೆದಿದೆ

ದಿನಾಂಕ : 02.08.2021 ರಂದು ಬೆಳಿಗ್ಗೆ 6.50ರ ವೇಳೆಗೆ ಜಯನಗರ 'ಬಿ' ಬ್ಲಾಕ್, ದಾವಣಗೆರೆಯಿಂದ ಬ್ಲ್ಯಾಕ್ ಲ್ಯಾಬರ್‌ಡಾರ್ (ಹೆಣ್ಣು) ನಾಯಿ ಕಳೆದಿದೆ, ಕಾಲಿನಲ್ಲಿ ಬಿಳಿ ಕೂದಲು ಇವೆ. ಈ ನಾಯಿಯನ್ನು ತಂದುಕೊಟ್ಟವರಿಗೆ ರೂ. 20,000 ನಗದು ಬಹುಮಾನ ಕೊಡಲಾಗುವುದು.

ಫೋ.:70221 20210


## ದೂಡಾ ಅಧ್ಯಕ್ಷರಾಗಿ ದೇವರಮನೆ ಶಿವಕುಮಾರ್ ?



ಬೆಂಗಳೂರು, ಆ.11- ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನಗರ ಪಾಲಿಕೆ ಮಾಜಿ ಸದಸ್ಯರೂ ಆಗಿರುವ ಬಿಜೆಪಿ ಮುಖಂಡ ದೇವರಮನೆ ಶಿವಕುಮಾರ್ ಅವರನ್ನು ಸರ್ಕಾರ ನೇಮಕ ಮಾಡಿದೆ ಎಂದು ವಿಶ್ವಸನೀಯ ಮೂಲಗಳು ತಿಳಿಸಿವೆ. ಕೆಟಿಜೆ ನಗರದ ಲಕ್ಷ್ಮಣ್, ಹೊಂಡದ ಸರ್ಕಲ್‌ನ (4ನೇ ಪುಟಕ್ಕೆ)

## ಬಹಿಷ್ಕಾರ : ವಕೀಲರ ಒಕ್ಕೂಟದ ಕ್ಷಮೆ ಯಾಚನೆ ಅಂಗೀಕಾರ

ಬೆಂಗಳೂರು, ಆ. 11 – ಈ ವರ್ಷದ ಆರಂಭದಲ್ಲಿ ನ್ಯಾಯಾಲಯದ ಕಲಾಪಗಳಿಗೆ ಬಹಿಷ್ಕಾರ ಹಾಕಿದ್ದಾಗಿ ದಾವಣಗೆರೆ ವಕೀಲರ ಒಕ್ಕೂಟದ ಪದಾಧಿಕಾರಿಗಳು ಸಲ್ಲಿಸಿದ ಬೇಷರತ್ ಕ್ಷಮಾ ಯಾಚನೆಯನ್ನು ಕರ್ನಾಟಕ ಹೈಕೋರ್ಟ್ ಅಂಗೀಕರಿಸಿದೆ. ಮುಖ್ಯ ನ್ಯಾಯಮೂರ್ತಿಗಳಾದ ಅಭಯ್ ಶ್ರೀನಿವಾಸ್ ಓಕ ಹಾಗೂ ನ್ಯಾಯಮೂರ್ತಿ ಎನ್. (4ನೇ ಪುಟಕ್ಕೆ)

### ಶರಣೆ ಎಂ.ಜಿ.ಮಲ್ಲಮ್ಮ ನಿಧನ



ಹೊಳಲ್ಕೆರೆ ತಾಲ್ಲೂಕು ಬಸಾಪುರದ ಗೌಡ್ರು ಕರಿಯಜ್ಜರ
ಶರಣ ದಿ॥ ಬಿ.ಕೆ. ಚಂದ್ರಶೇಖರಪ್ಪನವರ ಧರ್ಮಪತ್ನಿ

**ಶರಣೆ ಎಂ.ಜಿ.ಮಲ್ಲಮ್ಮ**

ಇವರು ದಿನಾಂಕ 11.08.2021ರ ಮಧ್ಯಾಹ್ನ 2.46 ಕ್ಕೆ ಶಿವೈಕ್ಯರಾದರು ಎಂದು ತಿಳಿಸಲು ವಿಷಾದಿಸುತ್ತೇವೆ.

ಮೃತರ ಅಂತ್ಯಕ್ರಿಯೆ ದಿನಾಂಕ.12.08.2021 ರ ಗುರುವಾರ ಬೆಳಿಗ್ಗೆ 10 ಗಂಟೆಗೆ ದಾವಣಗೆರೆಯ ಬಾಪೂಜಿ ಎಂಬಿಎ ಕಾಲೇಜು ಸಮೀಪದ ರುದ್ರಭೂಮಿಯಲ್ಲಿ ನಡೆಯಲಿದೆ.

ದುಃಖತಪ್ತರು: ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಮುಗಳಿಹಳ್ಳಿ ಗೌಡ್ರ ವಂಶಸ್ಥರು, ಬಸಾಪುರ ಗೌಡ್ರ ವಂಶಸ್ಥರು.

# ರಾಜ್ಯಸಭೆ : ಕಾಗದಗಳ ಹರಿದು ತೂರಾಟ

**ಮಾರ್ಷಲ್‌ಗಳ ಜೊತೆ ಸಂಘರ್ಷ ನಡೆಸಿದ ಸಂಸದರು**

**ರಾಜ್ಯಸಭಾಧ್ಯಕ್ಷರ ಪೀಠದ ಬಳಿ ನುಗ್ಗಲು ಯತ್ನ**

ನವದೆಹಲಿ, ಆ. 11 – ನಿನ್ನೆ ರಾಜ್ಯಸಭೆಯ ಪೀಠಗಳನ್ನು ಏರಿ ರಂಪಾಟ ನಡೆಸಿದ್ದ ಪ್ರತಿಪಕ್ಷದ ಸಂಸದರು, ಬುಧವಾರದಂದು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಕಾಗದಗಳನ್ನು ಹರಿದು ತೂರಿ, ಮಾರ್ಷಲ್‌ಗಳ ಜೊತೆ ಸಂಘರ್ಷ ನಡೆಸಿದ್ದಲ್ಲದೇ, ರಾಜ್ಯಸಭಾಧ್ಯಕ್ಷರ ಸ್ಥಾನದ ಬಳಿ ನುಗ್ಗಲು ಯತ್ನ ನಡೆಸಿದ ಘಟನೆ ನಡೆದಿದೆ.

ಶಾಂತಿಯುತ ಚರ್ಚೆಯ ನಂತರ ಒ.ಬಿ.ಸಿ. ಪಟ್ಟಿ ರೂಪಿಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡುವ ಸಂವಿಧಾನಿಕ ತಿದ್ದುಪಡಿ ಮಸೂದೆ ಅಂಗೀಕರಿಸಲಾಯಿತು. ನಂತರ ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳ ಖಾಸಗೀಕರಣದ ಮಸೂದೆ ಕೈಗೆತ್ತಿಕೊಳ್ಳಲಾಯಿತು.

ಆಗ ಸಂಸದರು ಸದನದ ಬಾವಿಗೆ ನುಗ್ಗಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಸುಮಾರು 50 ಭದ್ರತಾ ಸಿಬ್ಬಂದಿ ರಾಜ್ಯಸಭಾಧ್ಯಕ್ಷ ಎಂ. ವೆಂಕಯ್ಯ ನಾಯ್ಡು ಅವರ ಸುತ್ತ ನಿಂತು ಸಂಸದರು ಬಳಿ ಬರದಂತೆ ತಡೆದರು.

ಮಹಿಳಾ ಸಂಸದರಿದ್ದ ಕಡೆ ಮಹಿಳಾ ಭದ್ರತಾ ಸಿಬ್ಬಂದಿ ಹಾಗೂ ಪುರುಷ ಸಂಸದರಿದ್ದ ಕಡೆ ಪುರುಷ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

ಈ ನಡುವೆ, ಕಾಂಗ್ರೆಸ್, ಎಡರಂಗ, ತೃಣಮೂಲ ಕಾಂಗ್ರೆಸ್, ಡಿಎಂಕೆ ಮತ್ತಿತರೆ ಪ್ರತಿಪಕ್ಷಗಳ ಸಂಸದರು ತೀವ್ರ ಗದ್ದಲ ನಡೆಸಿದರು. ಕಾಗದಗಳನ್ನು ಹರಿದು ಸಭಾಧ್ಯಕ್ಷರ ಕಡೆ ತೂರಿದರು. ಕೆಲವರು ಭದ್ರತಾ ಸಿಬ್ಬಂದಿ ಜೊತೆ ಸಂಘರ್ಷ ನಡೆಸಿದರು.

ಪಟ್ಟು ಬಿಡದ ಸರ್ಕಾರ, ಈ ಗದ್ದಲದ ನಡುವೆಯೇ ಧ್ವನಿಮತದ ಮೂಲಕ ವಿಮಾ ಮಸೂದೆಗೆ ಅಂಗೀಕಾರ ಪಡೆದುಕೊಂಡಿತು. ಅಲ್ಪಾವಧಿ ಚರ್ಚೆಗೂ ಸಹ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಉತ್ತರಿಸಲು ಹೋಗಲಿಲ್ಲ.

ಗದ್ದಲದ ನಡುವೆ ಎರಡು ಬಾರಿ ಸದನ ಮುಂದೂಡಲಾಯಿತು. ಪ್ರತಿಪಕ್ಷಗಳ ಸಂಸದರು ಸಭಾತ್ಯಾಗ ಮಾಡಿದ ನಂತರ (4ನೇ ಪುಟಕ್ಕೆ)




### ಹಾರ್ದಿಕ ಅಭಿನಂದನೆಗಳು

ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮ ಪಂಚಾಯ್ತಿಗೆ
ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ

**ಶ್ರೀಮತಿ ಕೆ.ಸಿ. ಸುಮ**

ಅವರಿಗೆ ಹಾರ್ದಿಕ ಅಭಿನಂದನೆಗಳು.
ಇವರ ಅಧಿಕಾರವಧಿಯಲ್ಲಿ ಎಲೆಬೇತೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯಗಳಾಗಲೆಂದು ಆಶಿಸುತ್ತೇವೆ.

- ಜಿ.ಹೆಚ್. ರಾಮಚಂದ್ರಪ್ಪ, ದೂಡಾ ಮಾಜಿ ಅಧ್ಯಕ್ಷರು
- ಗುಂಟನೂರು ಜಯದೇವಪ್ಪ, ಮಾಜಿ ಪ್ರಧಾನರು
- ಕೆ.ಎಂ. ಚಂದ್ರಶೇಖರಪ್ಪ ✻ ಎಂ. ಶಿವಕುಮಾರ್
- ಎಸ್.ಜಿ. ಪ್ರಭುದೇವ್, ಲ್ಯಾಂಡ್ ಲಾರ್ಡ್
- ಜಿ.ಹೆಚ್. ಲಿಂಗರಾಜ್, ಮಹಾನಂದಿ ಪೆಟ್ರೋಲ್ ಬಂಕ್
- ಅಜ್ಜಪ್ಪರ ಶಿವಣ್ಣ, ಕೃಷಿಕ ಸಮಾಜದ ನಿರ್ದೇಶಕರು
- ಬಿಂದಪ್ಪರ ರೇವಣಸಿದ್ದಪ್ಪ, ಗೌರಮ್ಮ, ಶಾಮನೂರು.
- ಜಿ.ಟಿ ತಿಪ್ಪೇಸ್ವಾಮಿ, ಶಾಂತಮ್ಮ, ಶಾಮನೂರು.
- ಸಂಗಪ್ಪ ಗೌಡ್ರು, ಉತ್ತರ ವಲಯ, ಬಿಜೆಪಿ ಅಧ್ಯಕ್ಷರು
- ಎ.ಬಿ. ಕರಿಬಸಪ್ಪ, ಜಿ.ಪಂ. ಮಾಜಿ ಅಧ್ಯಕ್ಷರು
- ಎಂ. ನಾಗರಾಜ್, ಕೃಷಿಕ ಸಮಾಜದ ನಿರ್ದೇಶಕರು
- ರವಿಕುಮಾರ್, ಕೃಷಿಕ ಸಮಾಜದ ನಿರ್ದೇಶಕರು
- ಬಸವನಗೌಡ್ರು, ವಕೀಲರು
- ಬೂದಿಹಾಳ್ ಲಿಂಗರಾಜಣ್ಣ, ಶಾಮನೂರು
- ಗುಂಟನೂರು ಕಲ್ಲೇಶ್, ಶಾಮನೂರು
- ನಾಗೇಂದ್ರಪ್ಪ, ಎಲೆಬೇತೂರು



### ನಾಗರ ಪಂಚಮಿ ಹಾಗೂ ಸ್ವಾತಂತ್ರ್ಯೋತ್ಸವದ ಶುಭಾಶಯಗಳು



ನಾಡಿನ ಜನತೆಗೆ ಹಾಗೂ ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ಸರ್ವರಿಗೂ
ನಾಗರ ಪಂಚಮಿ ಹಾಗೂ 75ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು...

**ಯಶವಂತಗೌಡ. ಎಂ.ಪಿ.**
ಕಾಂಗ್ರೆಸ್ ಮುಖಂಡರು ಹರಪನಹಳ್ಳಿ ವಿಧಾನಸಭಾ ಕ್ಷೇತ್ರ

# ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರುದ್ಧ ವಿವಿಧ ಸಂಘಟನೆಗಳ ಪ್ರತಿಭಟನೆ

ಹರಪನಹಳ್ಳಿ, ಆ.11- ಪೆಟ್ರೋಲ್, ಡೀಸೆಲ್, ಗ್ಯಾಸ್ ಸೇರಿದಂತೆ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ಇಳಿಸುವುದು ಸೇರಿದಂತೆ, ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಿಐಟಿಯು, ಎಐಕೆಎಸ್, ಎಐಎಡಬ್ಲ್ಯೂ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಉಪವಿಭಾಗಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಪ್ರವಾಸಿ ಮಂದಿರ ವೃತ್ತದಿಂದ ಹೊಸಪೇಟೆ ರಸ್ತೆ ಮೂಲಕ ಮೆರವಣಿಗೆ ಮೂಲಕ ತೆರಳಿ ಮಿನಿ ವಿಧಾನ ಸೌಧದ ಬಳಿ ಬಹಿರಂಗ ಸಭೆ ನಡೆಸಿದರು.

ಸಂಘಟನೆಯ ಮುಖಂಡರಾದ ಹೊಸಹಳ್ಳಿ ಮಲ್ಲೇಶ್ ಮಾತನಾಡಿ, ರೈತವಿರೋಧಿ ಕೃಷಿ ಕಾಯ್ದೆಗಳು, ವಿದ್ಯುಚ್ಛಕ್ತಿ ಮಸೂದೆ ಹಿಂಪಡೆಯಬೇಕು, ಕಾರ್ಮಿಕ ವಿರೋಧಿ ನೀತಿಗಳನ್ನು ವಾಪಾಸ್ ಪಡೆಯಬೇಕು.



ಕೃಷಿ ಉತ್ಪನ್ನಗಳಿಗೆ ಕಾನೂನು ಬದ್ಧ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಬೇಕು. ಆಹಾರ ಧಾನ್ಯಗಳ ಉಚಿತ ರೇಷನ್ ವ್ಯವಸ್ಥೆ ಮಾಡಬೇಕು, ಆದಾಯ ತೆರಿಗೆ ಮಿತಿಗೆ ಒಳಪಟ್ಟು ಆದಾಯವಿರುವ ಪ್ರತಿಯೊಬ್ಬರಿಗೂ ಮಾಸಿಕ 10 ಸಾವಿರ ರೂ. ನೀಡಬೇಕು ಎಂದು ಒತ್ತಾಯಿಸಿದರು.

**ಹರಪನಹಳ್ಳಿ**

ಸಂಘಟನೆಯ ಟಿ.ವಿ. ರೇಣುಕಮ್ಮ ಮಾತನಾಡಿ, ಸಾರ್ವಜನಿಕ ಉದ್ದಿಮೆಗಳ ಎಲ್ಲಾ ಸ್ವರೂಪದ ಖಾಸಗೀಕರಣವನ್ನು ಕೈ ಬಿಡಬೇಕು. ಎಪಿಎಂಸಿ ಕಾಯ್ದೆ, ಭೂ ಸುಧಾರಣಾ ಕಾಯ್ದೆ, ಜಾನುವಾರು ಹತ್ಯೆ ಕಾಯ್ದೆಗಳಿಗೆ ಮಾಡಲಾಗುವ ತಿದ್ದುಪಡಿಗಳನ್ನು ಹಿಂಪಡೆಯಬೇಕು.

ಉದ್ಯೋಗ ಖಾತ್ರಿ ಯೋಜನೆಯಲ್ಲಿ 200 ದಿನ ಕೆಲಸ, 600 ರೂ. ಕೂಲಿ ನಿಗದಿ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಹುಲಿಕಟ್ಟಿ ಎಚ್. ರಹಮತ್, ಭರಮಪ್ಪ, ಕುದುರಿ ನಾಗರಾಜ ಇನ್ನಿತರರು ಹಾಜರಿದ್ದರು.

# ವಿದ್ಯುತ್ ಖಾಸಗೀಕರಣಕ್ಕೆ ಹೊನ್ನಾಳಿ ರೈತರ ತೀವ್ರ ವಿರೋಧ



ಹೊನ್ನಾಳಿ, ಆ.11- ರೈತ ಸಂಘ ಹಸಿರು ಸೇನೆ ತಾಲ್ಲೂಕು ಅಧ್ಯಕ್ಷ ಕಡದಕಟ್ಟೆ ಜಗದೀಶ್ ನೇತೃತ್ವದಲ್ಲಿ ವಿದ್ಯುತ್ ಖಾಸಗೀಕರಣ ಹಾಗೂ ರೈತ ವಿರೋಧಿ ಕಾಯ್ದೆಗಳನ್ನು ರದ್ದುಗೊಳಿಸುವಂತೆ ಒತ್ತಾಯಿಸಿ, ಸರ್ಕಾರಕ್ಕೆ ತಹಶೀಲ್ದಾರ್ ಮುಖಾಂತರ ಮನವಿ ಸಲ್ಲಿಸಿದರು.

ಸಂಘದ ಸದಸ್ಯರಾದ ಜೀವೇಂದ್ರ, ತುಗ್ಗಲಹಳ್ಳಿ ಚನ್ನಪ್ಪ, ಹಿರೇಗೋಣಿಗೆರೆ ಸಣ್ಣ ಚೌಡಪ್ಪ, ಯಲ್ಲಪ್ಪ, ದೊಡ್ಡೇರಹಳ್ಳಿ ವಿರುಪಾಕ್ಷಪ್ಪ, ಬಳ್ಳೇಶ್ವರ ಪರಮೇಶ್ವರಪ್ಪ, ಗದುಗೇಶಪ್ಪ, ಚಂದ್ರಶೇಖರ, ಗಜೇಂದ್ರ, ಬಸವರಾಜ ಇನ್ನಿತರರಿದ್ದರು.

# ಅರ್ಹ ಕಾರ್ಮಿಕ ಫಲಾನುಭವಿಗಳಿಗೆ ಕಿಟ್ ವಿತರಿಸಲು ಶಾಸಕರ ನಿರ್ದೇಶನ



**ಹೊನ್ನಾಳಿ**

ಹೊನ್ನಾಳಿ, ಆ.11 - ಹೊನ್ನಾಳಿ - ನ್ಯಾಮತಿ ಅವಳಿ ತಾಲ್ಲೂಕಿನ ಕಟ್ಟಡ ಕಾರ್ಮಿಕರಿಗೆ ನೀಡುವ ಫುಡ್‌ಕಿಟ್‌ನಲ್ಲಿ ಯಾವುದೇ ರೀತಿಯ ಅವ್ಯವಹಾರವಾಗದಂತೆ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದ್ದೇನೆಂದು ಶಾಸಕ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಹೊನ್ನಾಳಿ - ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ 11,129 ಜನ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರಿದ್ದು, ಅವರಿಗೆ ಫುಡ್‌ಕಿಟ್ ನೀಡುವ ಉದ್ದೇಶದಿಂದ ಸರ್ಕಾರ 10,000 ಫುಡ್‌ಕಿಟ್‌ಗಳನ್ನು ನೀಡಿದ್ದು ಇನ್ನು ಹೆಚ್ಚಿನ ಫುಡ್ ಕಿಟ್ ನೀಡುವಂತೆ ಸಿಎಂ ಬಸವರಾಜ ಬೊಮ್ಮಾಯಿ ಅವರ ಬಳಿ ಮನವಿ ಮಾಡಲಾಗಿದ್ದು, ಇದಕ್ಕೆ ಸಿಎಂ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

ಅವಳಿ ತಾಲ್ಲೂಕಿನಲ್ಲಿ ಪ್ರಸ್ತುತ ಕಾರ್ಮಿಕ ಇಲಾಖೆಯಲ್ಲಿ 9,887 ಜನ ನೋಂದಾಯಿತ ಕಟ್ಟಡ ಕಾರ್ಮಿಕರು ನೋಂದಣಿ ಮಾಡಿಕೊಂಡಿದ್ದು ಇನ್ನು 1,243 ಕ್ಕೂ ಹೆಚ್ಚು ಕಾರ್ಮಿಕರು ಮರು ನೋಂದಣಿ ಮಾಡಿಸಿಕೊಂಡಿಲ್ಲ ಎಂದ ಶಾಸಕರು, ಸೇವಾ ಸಿಂಧು ಹಾಗೂ ಗ್ರಾಮ ಒನ್ ಕೇಂದ್ರಗಳಲ್ಲಿನ ಮಾಹಿತಿಯನ್ನು ಕೂಡ ಸಂಗ್ರಹಿಸುವಂತೆ ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿ ಎಲ್ಲಾ ಅರ್ಹ ಫಲಾನುಭವಿಗಳಿಗೆ ಶೀಘ್ರದಲ್ಲೇ ಫುಡ್‌ಕಿಟ್ ನೀಡಲಾಗುವುದು ಎಂದರು.

ಈಗಾಗಲೇ ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ ಫುಡ್‌ಕಿಟ್‌ನಲ್ಲಿ ಯಾವುದೇ ಅವ್ಯವಹಾರವಾಗದಂತೆ ಪಾರದರ್ಶಕವಾಗಿ ಫುಡ್‌ಕಿಟ್ ನೀಡುವ ದೃಷ್ಟಿಯಿಂದ ಕಟ್ಟುನಿಟ್ಟಿನ ಸೂಚನೆ ನೀಡಿದ್ದು ಅರ್ಹ ಫಲಾನುಭವಿಗಳ ಪಟ್ಟಿ ಸಿದ್ದಪಡಿಸಿ ನೀಡುವಂತೆ ಹೇಳಿದ್ದೇನೆ ಎಂದ ಶಾಸಕರು, ಇನ್ನು ಮೂರ್ನಾಲ್ಕು ದಿನಗಳಲ್ಲಿ ಅರ್ಹ ಫಲಾನುಭವಿಗಳ ಪಟ್ಟಿ ತರಿಸಿಕೊಂಡು ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನಲ್ಲಿರುವ ಕಟ್ಟಡ ಕಾರ್ಮಿಕರಿಗೆ ವಿತರಿಸುವ ಕೆಲಸ ಮಾಡುತ್ತೇನೆ ಎಂದರು.

# ಎಸ್ಸೆಸ್ಸೆಲ್ಸಿ : ಹೆಚ್.ಪಿ.ಭೂಮಿಕಾಗೆ ಸನ್ಮಾನ



**ಜಗಳೂರು**

ಜಗಳೂರು, ಆ.11- ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 623 ಅಂಕಗಳನ್ನು ಪಡೆದು ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿರುವ ಪಟ್ಟಣದ ಎನ್‌ಕೆಎಂ ಪ್ರೌಢಶಾಲೆ ವಿದ್ಯಾರ್ಥಿನಿ ಹೆಚ್.ಪಿ. ಭೂಮಿಕಾಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಆವರಣದಲ್ಲಿ ಎನ್‌ಜಿಒ, ಬಿಆರ್‌ಸಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

ಬಿಇಓ ದಾರುಕೇಶ್ ಮಾತನಾಡಿ, ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತಾಲ್ಲೂಕಿಗೇ ಪ್ರಥಮ ಸ್ಥಾನ ಪಡೆದಿರುವ ವಿದ್ಯಾರ್ಥಿನಿಯ ತಂದೆ, ತಾಯಿ ಇಬ್ಬರೂ ಶಿಕ್ಷಣ ಇಲಾಖೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದು, ಮಗಳ ಭವಿಷ್ಯಕ್ಕೆ ಉತ್ತಮ ಮಾರ್ಗದರ್ಶನ ನೀಡಿದ್ದಾರೆ ಎಂದರು.

ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ ಶಾಂತೇಶ್ 625 ಕ್ಕೆ 619 ಅಂಕ ಗಳಿಸಿ ದ್ವಿತೀಯ ಸ್ಥಾನ ಪಡೆದಿದ್ದು ಶಾಸಕರಿಗೆ ಇವರಿಬ್ಬರ ಮಾಹಿತಿ ನೀಡಲಾಗಿದೆ. ಅವರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳನ್ನು ಆಗಸ್ಟ್ 15 ರಂದು ವೇದಿಕೆಯಲ್ಲಿ ಸನ್ಮಾನಿಸಿ ಪ್ರೋತ್ಸಾಹಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಪೋಷಕರಾದ ಶಿಕ್ಷಕ ಬಸವರಾಜ್, ಶಿಕ್ಷಕಿ ಅನಿತಾ, ಬಿಆರ್‌ಸಿ ಗಿರೀಶ್, ಎನ್‌ಜಿಒ ತಾಲ್ಲೂಕು ಗೌರವಾಧ್ಯಕ್ಷ ಚಂದ್ರಪ್ಪ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷ ಉಲೆಪ್ಪ, ಪ್ರಧಾನ ಕಾರ್ಯದರ್ಶಿ ಎಂ. ಪ್ರಕಾಶ್, ಬಡ್ತಿ ಮುಖ್ಯಶಿಕ್ಷಕರ ಸಂಘದ ಗೌರವಾಧ್ಯಕ್ಷ ಕೇಶವಮೂರ್ತಿ, ಶಿಕ್ಷಕ ಬಸವರಾಜ್ ಉಪಸ್ಥಿತರಿದ್ದರು.

# ಶ್ರೀ ಶಂಕರ ದಾಸಿಮಯ್ಯ ಜಯಂತಿ




**ರಾಣೇಬೆನ್ನೂರು**

ರಾಣೇಬೆನ್ನೂರು, ಆ.11- ಶ್ರೀ ಲಕ್ಷ್ಮಿ ದೇವಸ್ಥಾನದಲ್ಲಿ ಬಣಗಾರ ಸಮಾಜದಿಂದ ಶ್ರೀ ಶಂಕರ ದಾಸಿಮಯ್ಯ ಜಯಂತಿ ಆಚರಿಸಲಾಯಿತು.

ಪಂಚಯ್ಯಸ್ವಾಮಿಗಳು ನೇತೃತ್ವ ವಹಿಸಿದ್ದರು. ನಿವೃತ್ತ ಶಿಕ್ಷಕ ವಿ. ವಿ.ಹರಪನಹಳ್ಳಿ, ದಾಸಿಮಯ್ಯ ಕುರಿತು ಉಪನ್ಯಾಸ ನೀಡಿದರು. ಗಂಗಾಧರ ಸಾಮಂತ್ರಿ, ಬಸವರಾಜ ಚೊಣ್ಣದ, ಶಂಕ್ರಪ್ಪ ಬಣಗಾರ, ನಾಗರಾಜ ಬಣಗಾರ, ಚಂದ್ರಪ್ಪ ಚಿತ್ತರಗಿ, ಚೈತ್ರ ಮುಂಡರಗಿ, ಚಿದಾನಂದ ಮುಂಡರಗಿ ಇನ್ನಿತರರು ಭಾಗವಹಿಸಿದ್ದರು.

# ಗೋಣಿವಾಡ ಸೋಮೇಶ್ವರ ಶಾಲೆಗೆ ಎಸ್ಸೆಸ್ಸೆಲ್ಸಿಯಲ್ಲಿ ಶೇ. 100 ಫಲಿತಾಂಶ



ದಾವಣಗೆರೆ, ಆ. 11- ಚನ್ನಗಿರಿ ಮುಖ್ಯರಸ್ತೆಯಲ್ಲಿರುವ ಗೋಣಿವಾಡದಲ್ಲಿನ ಶ್ರೀ ಸೋಮೇಶ್ವರ ವಸತಿಯುತ ವಿದ್ಯಾಲಯಕ್ಕೆ ಪ್ರಸ್ತುತ ಶೈಕ್ಷಣಿಕ ವರ್ಷದ ಎಸ್ಸೆಸ್ಸೆಲ್ಸಿ ಫಲಿತಾಂಶ ಶೇ. 100 ರಷ್ಟು ಫಲಿತಾಂಶ ಲಭಿಸಿದ್ದು, 8 ವರ್ಷಗಳಿಂದ ಸತತವಾಗಿ ಶೇ. 100 ಫಲಿತಾಂಶ ಲಭಿಸಿರುವುದು ವಿಶೇಷವಾಗಿದೆ.

ಉನ್ನತ ಶ್ರೇಣಿಯಲ್ಲಿ 36, ಪ್ರಥಮ ದರ್ಜೆಯಲ್ಲಿ 2 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಕು. ಸಂಜನ ಜಿ.ಎಸ್. ಮತ್ತು ಕು. ಯಶ್ವಂತ್ ಇವರು 625ಕ್ಕೆ 613 ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿರುತ್ತಾರೆ. ಕು. ಸಚಿನ್ ಎನ್.ಎಸ್. 609 ಅಂಕ ಪಡೆದು ದ್ವಿತೀಯ ಹಾಗೂ ದೀಪಿಕಾ ಬಿ 605 ಅಂಕ ಪಡೆದು ತೃತೀಯ ಸ್ಥಾನ ಪಡೆದಿರುತ್ತಾರೆ.

# ಕುರ್ಕಿ ನಾಲೆಯಲ್ಲಿ ಅಪರಿಚಿತ ಮಹಿಳೆ ಶವ ಪತ್ತೆ

ದಾವಣಗೆರೆ, ಆ.11- ತಾಲ್ಲೂಕಿನ ಕುರ್ಕಿ ಬಳಿಯ ಭದ್ರಾ ನಾಲೆಯಲ್ಲಿ ಅಪರಿಚಿತ ಮಹಿಳೆಯೊಬ್ಬಳ ಶವ ಪತ್ತೆಯಾಗಿದೆ. ಪತ್ತೆಯಾಗಿರುವ ಮಹಿಳೆ ಸುಮಾರು ಎಂಟತ್ತು ದಿನಗಳ ಹಿಂದೆ ಮೃತಪಟ್ಟಿರಬಹುದು ಎಂದು ಶಂಕೆ ವ್ಯಕ್ತಪಡಿಸಲಾಗಿದೆ. ಕುರ್ಕಿ ಬಳಿಯ ಚಾನೆಲ್ ಮುಖಾಂತರ ನೀರಿನಲ್ಲಿ ತೇಲಿಕೊಂಡು ಬಂದಿದ್ದು, ಮಹಿಳೆಯೇ ನಾಲೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾಳಾ ಅಥವಾ ಆಕೆಯನ್ನು ಕೊಲೆ ಮಾಡಿ ಬಿಸಾಕಲಾಗಿದೆಯಾ ಎಂಬುದರ ಬಗ್ಗೆ ತಿಳಿದು ಬಂದಿಲ್ಲ. ಮಹಿಳೆ ಶವ ಪತ್ತೆ ಸ್ಥಳಕ್ಕೆ ಹದಡಿ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ನಗರದಲ್ಲಿ ಇಂದು ತಳ್ಳುವ ತರಕಾರಿ ಗಾಡಿ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ತಳ್ಳುವ ತರಕಾರಿ ಗಾಡಿ ವಿತರಣೆ ಕಾರ್ಯಕ್ರಮವು ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನ ಕಚೇರಿಯಲ್ಲಿ ಇಂದು ಸಂಜೆ 5 ಕ್ಕೆ ನಡೆಯಲಿದೆ. ಶಿವನಕೆರೆ ಬಸವಲಿಂಗಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿ : ಶ್ರೀಮತಿ ಮಂಜುಳಾ ಬಸವಲಿಂಗಪ್ಪ. ಡಾ. ಪ್ರಭು ಬಸವನಗೌಡ, ಬಿ.ಎನ್. ವೀರಪ್ಪ, ಸಂಜಯ್‌ಕುಮಾರ್ ಅರಕೇರಿ (ರಾಣೇಬೆನ್ನೂರು) ಅವರುಗಳು ಗಾಡಿಗಳ ದಾನಿಗಳು.

# ಶ್ರದ್ಧಾ ಕೇಂದ್ರದ ಸ್ವಚ್ಛತಾ ಕಾರ್ಯ



**ಜಿಗಳಿ**

ಮಲೇಬೆನ್ನೂರು, ಆ.11- ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಂದಿತಾವರೆ ವಲಯದ ಜಿಗಳಿ ಗ್ರಾಮದಲ್ಲಿ ಶ್ರೀ ರಂಗನಾಥ ಸ್ವಾಮಿಯ ದೇವಸ್ಥಾನವನ್ನು ಸ್ವಚ್ಛ ಮಾಡಲಾಯಿತು. ಯೋಜನೆ ವತಿಯಿಂದ ಶ್ರದ್ಧಾ ಕೇಂದ್ರದ ಸ್ವಚ್ಛತಾ ಕಾರ್ಯಕ್ರಮವನ್ನು ಎಲ್ಲಾ ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಯೋಜನಾಧಿಕಾರಿ ವಸಂತ್ ದೇವಾಡಿಗ ತಿಳಿಸಿದ್ದಾರೆ. ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ಕರಿಯಮ್ಮ, ದೇವಸ್ಥಾನ ಕಮಿಟಿಯ ಗೌಡ್ರ ಬಸವರಾಜಪ್ಪ, ಒಕ್ಕೂಟದ ಅಧ್ಯಕ್ಷ ರುದ್ರಗೌಡ, ವಲಯದ ಮೇಲ್ವಿಚಾರಕರಾದ ಪದ್ಮಾವತಿ, ಸೇವಾ ಪ್ರತಿನಿಧಿ ಶೋಭಾ ಮತ್ತಿತರರು ಕಾರ್ಯಕ್ರಮದಲ್ಲಿದ್ದರು.

# ರಾಣೇಬೆನ್ನೂರು : ರೇನ್‌ಬೋ ಶಾಲೆಗೆ ಶೇ. 100 ಫಲಿತಾಂಶ



ರಾಣೇಬೆನ್ನೂರು, ಆ.11- ತಾಲ್ಲೂಕಿನ ಕಮದೋಡ ಗ್ರಾಮದ ರೇನ್ ಬೋ ರೆಸಿಡೆನ್ಸಿಯಲ್ ಪಬ್ಲಿಕ್ ಶಾಲೆಗೆ ಶೇ. 100 ಫಲಿತಾಂಶ ಲಭಿಸಿದೆ.

ಪರೀಕ್ಷೆಗೆ ಹಾಜರಾದ 34 ವಿದ್ಯಾರ್ಥಿಗಳ ಪೈಕಿ 8 ಉನ್ನತ ಶ್ರೇಣಿ ಹಾಗೂ ಉಳಿದ 26 ವಿದ್ಯಾರ್ಥಿಗಳು ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾಗಿದ್ದಾರೆ. ಶಾಲೆಗೆ ಎಂ.ಡಿ. ಲಾವಣ್ಯ 96.80, ಎಂ.ಕೆ. ಪ್ರವೀಣ ಶೇ. 90.40, ಎಸ್.ಟಿ. ಮಹಾಂತೇಶ್ ಶೇ. 90.24, ಎಂ. ಮಹಮ್ಮದ್ ಇಸಾಕ್ ಶೇ. 89.44, ಅಯ್ಯನಗೌಡ ಶೇ. 88.64 ಮತ್ತು ಎಸ್.ಬಿ. ಮಂಜುನಾಥ ಶೇ. 88.64 ಅಂಕಗಳನ್ನು ಪಡೆದುಕೊಂಡಿರುತ್ತಾರೆ.

# ಕೂಡ್ಲಿಗಿಯಲ್ಲಿ ಕಾರ್ಮಿಕ ಸಂಘಟನೆಗಳಿಂದ ಹಕ್ಕೊತ್ತಾಯ



ಕೂಡ್ಲಿಗಿ, ಆ.11- ಐತಿಹಾಸಿಕ ಕಗವಿಟ್ ಇಂಡಿಯಾ ಚಳವಳಿ ನೆನಪಿನಲ್ಲಿ, ಸಿಐಟಿಯು ಹಾಗೂ ಸಿಪಿಐ, ಎಐವೈಎಫ್ ಕಾರ್ಮಿಕ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ 'ಖಾಸಗಿ ಕಂಪನಿಗಳೇ ಭಾರತ ಬಿಟ್ಟು ತೊಲಗಿ' ಎಂಬ ಘೋಷಣೆಗಳೊಂದಿಗೆ, ವಿವಿಧ ಕಾರ್ಮಿಕ ಮುಖಂಡರ ನೇತೃತ್ವದಲ್ಲಿ ಪ್ರತಿಭಟಿಸಿ ಹಕ್ಕೊತ್ತಾಯ ಮಾಡಿದರು.

ಈ ವೇಳೆ ಕಟ್ಟಡ ಮತ್ತು ಇತರೆ ನಿರ್ಮಾಣ ಕೂಲಿ ಕಾರ್ಮಿಕರ ಸಂಘಟನೆ ಮುಖಂಡ ಹಾಗೂ ವಕೀಲ ಸಿ.ವಿರುಪಾಕ್ಷಪ್ಪ ಹಾಗೂ ಹೋರಾಟಗಾರ ಹೆಚ್. ವೀರಣ್ಣ ಮತ್ತು ಗುನ್ನಳ್ಳಿ ರಾಘವೇಂದ್ರ ಮಾತನಾಡಿದರು.

ಇಪ್ಟಾ ರಂಗ ನಿರ್ದೇಶಕ ಭಿಷ್ಣಳ್ಳಿ ಸಾಂಬಶಿವ ದಳವಾಯಿ ಕ್ರಾಂತಿಗೀತೆಗಳನ್ನು ಹಾಡಿದರು. ಉಪ ತಹಶೀಲ್ದಾರ್ ಅರುಂಧತಿ ನಾಗವಿ ಅವರಿಗೆ ಹಕ್ಕೊತ್ತಾಯ ಪತ್ರ ನೀಡಿದ ಸಂದರ್ಭದಲ್ಲಿ ಮುಖಂಡರಾದ ಪೆನ್ನಪ್ಪ, ಸಾಲುಮನಿ ರಾಘವೇಂದ್ರ, ಕರಿಯಪ್ಪ ಮತ್ತಿತರರು ಭಾಗವಹಿಸಿದ್ದರು.

# ಕಾನಹಳ್ಳಿ ಶಾಲೆಗೆ ಪಿಡಿಓ ಭೇಟಿ



**ಹರಪನಹಳ್ಳಿ**

ಹರಪನಹಳ್ಳಿ, ಆ.11- ತಾಲ್ಲೂಕಿನ ಕಾನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮಾಡ್ಲಗೇರಿ ಗ್ರಾ.ಪಂ ಪಿಡಿಓ ಆನಂದನಾಯ್ಕ ಭೇಟಿ ನೀಡಿ, ಶಾಲಾ ಸೌಲಭ್ಯಗಳ ಬೇಡಿಕೆಯ ಮಾಹಿತಿ ಪಡೆದರು. ಮುಖಂಡರಾದ ರಾಮಕೃಷ್ಣ, ಮುಂಡರಗಿ ಪ್ರಕಾಶ್, ಗ್ರಾ.ಪಂ. ಸದಸ್ಯ ಉಚ್ಚೆಂಗಪ್ಪ, ಮುಖ್ಯ ಶಿಕ್ಷಕಿ ಲಕ್ಷ್ಮವ್ವ ರಂಗಣ್ಣನವರ್ ಹಾಗು ಇತರರಿದ್ದರು.

# ಡಾ. ಬಸವರಾಜ ಕೇಲಗಾರಗೆ ಸನ್ಮಾನ



ರಾಣೇಬೆನ್ನೂರು, ಆ.11- ದಾವಣಗೆರೆಯಲ್ಲಿ ಕಳೆದ ವಾರ ನಡೆದ ಬಿಜೆಪಿ ವಿವಿಧ ಪ್ರಕೋಷ್ಠಗಳ ಸಂಚಾಲಕರು, ಸಹಸಂಚಾಲಕರ ಸಭೆಯಲ್ಲಿ ರಾಜ್ಯ ನೇಕಾರ ಪ್ರಕೋಷ್ಠದ ಸಂಚಾಲಕರು, ವಾಯವ್ಯ ಸಾರಿಗೆ ಸಂಸ್ಥೆ ಉಪಾಧ್ಯಕ್ಷರಾಗಿ ನೇಮಕಗೊಂಡಿರುವ ರಾಣೇಬೆನ್ನೂರಿನ ಡಾ. ಬಸವರಾಜ ಕೇಲಗಾರ ಅವರನ್ನು ಅಭಿನಂದಿಸಲಾಯಿತು. ಶಾಸಕ ಎಸ್.ಎ. ರವೀಂದ್ರನಾಥ್, ಪ್ರಕೋಷ್ಠಗಳ ಸಂಯೋಜಕ ಭಾನುಪ್ರಕಾಶ್, ಸಹ ಸಂಯೋಜಕ ಡಾ. ಎ.ಹೆಚ್.ಶಿವಯೋಗಿಸ್ವಾಮಿ ಇನ್ನಿತರರಿದ್ದರು.


# ಮಹಿಳಾ ಸೇವಾ ಸಮಾಜ (ರಿ.)

ಅಶೋಕ ರಸ್ತೆ, ದಾವಣಗೆರೆ-577 002. ಫೋನ್ : 08192-230084



ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉನ್ನತ ದರ್ಜೆಯೊಂದಿಗೆ ಉತ್ತೀರ್ಣಗೊಂಡು ಉತ್ತಮ ಫಲಿತಾಂಶ ತಂದ ವಿದ್ಯಾರ್ಥಿಗಳಿಗೆ ಆಡಳಿತ ಮಂಡಳಿ ಹಾಗೂ ಅಧ್ಯಾಪಕ ವೃಂದದವರು ಶುಭಾಶಯ ಕೋರಿದ್ದಾರೆ.

2020-21 ನೇ ಸಾಲಿನ ಎಸ್.ಎಸ್.ಎಲ್.ಸಿ ಉತ್ತಮ ಫಲಿತಾಂಶ 100%

ಪ್ರಥಮ ದರ್ಜೆ - 20, ದ್ವಿತೀಯ ದರ್ಜೆ-21



| ದೇವಿಕ ದಿನಮಣಿ | ರಮೇಶ | ಮೂರ್ತಿ ಎನ್. |
|---|---|---|
| 572 | 554 | 532 |
| 91.52% | 88.64% | 85.12% |

## ನರ್ಸರಿ ಹಾಗೂ ಪ್ರಾಥಮಿಕ ಶಾಲೆಗಳಿಗೆ 2021-22 ನೇ ವರ್ಷಕ್ಕೆ ಪ್ರವೇಶ ಪ್ರಕಟಣೆ





ಉಚಿತ ಶಿಕ್ಷಣ, ಪಠ್ಯಪುಸ್ತಕ, ಬಿಸಿಯೂಟ ಮತ್ತು ಹಾಲು ಇತರೆ ಸೌಲಭ್ಯ ಕಲ್ಪಿಸಿಕೊಡಲಾಗುವುದು

ಪ್ರಾಥಮಿಕ 1ನೇ ತರಗತಿ ಹಾಗೂ ಪ್ರೌಢಶಾಲೆಯ 8ನೇ ತರಗತಿಗೆ ಉಚಿತ ಪ್ರವೇಶ ಪ್ರಕಟಣೆ. ಮೊದಲ ಬಂದವರಿಗೆ ಆದ್ಯತೆ/ಕೇವಲ ಕೆಲವೇ ದಾಖಲಾತಿಗೆ ಅವಕಾಶ ಇರುತ್ತದೆ

2021-22ನೇ ಶೈಕ್ಷಣಿಕ ವರ್ಷಕ್ಕೆ LKG, UKG, ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಪ್ರವೇಶ ಪ್ರಾರಂಭವಾಗಿರುತ್ತದೆ. ಉಚಿತ ಶಿಕ್ಷಣ, ಉಚಿತ ಪಠ್ಯಪುಸ್ತಕ, ವಿದ್ಯಾರ್ಥಿ ವೇತನ ಇನ್ನೂ ಹಲವಾರು ಸೌಲಭ್ಯಗಳಿರುತ್ತವೆ.

**ಶಾಲೆಯ ವೈಶಿಷ್ಟ್ಯತೆ:** ದಾವಣಗೆರೆ ಹೃದಯ ಭಾಗದಲ್ಲಿದ್ದು, ಶ್ರೀ ಜಯದೇವ ಸರ್ಕಲ್, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ನಗರ ಸಾರಿಗೆ ಬಸ್ ನಿಲುಗಡೆಯೂ ಹತ್ತಿರವಾಗಿದ್ದು, ಗ್ರಾಮೀಣ ವಿದ್ಯಾರ್ಥಿಗಳಿಗೆ ನಗರದ ಹೊರ ಭಾಗದಿಂದ ಬರುವ ವಿದ್ಯಾರ್ಥಿಗಳಿಗೂ ಅನುಕೂಲವಾಗಿರುತ್ತದೆ , ♦ ಗ್ರಂಥಾಲಯ ವ್ಯವಸ್ಥೆ ♦ ಬಿಸಿ ಊಟದ ಯೋಜನೆ ♦ ಕ್ಷೀರ ಭಾಗ್ಯದ ಯೋಜನೆ ♦ ವಿಶೇಷ ತರಗತಿಗಳ ವ್ಯವಸ್ಥೆ ♦ C.C.E ಆಧಾರಿತ ಪರೀಕ್ಷೆ ♦ ಸಾಂಸ್ಕೃತಿಕ ಹಾಗೂ ಕ್ರೀಡಾ ಪ್ರೋತ್ಸಾಹ.

ಪ್ರವೇಶ ಅರ್ಜಿಗಳನ್ನು ಬೆಳಿಗ್ಗೆ 10.30 ರಿಂದ 2.00ರವರೆಗೆ ವಿತರಿಸಲಾಗುವುದು.

ಶ್ರೀಮತಿ ಕೆ.ಕೆ. ಸುಶೀಲಮ್ಮ, ಅಧ್ಯಕ್ಷರು   ಶ್ರೀಮತಿ ಜಯ್ಯಮ್ಮ ನೀಲಗುಂದ, ಕಾರ್ಯದರ್ಶಿ


## ಕೆ.ಸಿ. ಮೋಹನಕುಮಾರ್ ನಿಧನ



ದಾವಣಗೆರೆಯ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿನ ತುಂಗಭದ್ರಾ ಬಡಾವಣೆ ವಾಸಿ ಹಾವೇರಿ ಜಿಲ್ಲೆ ರಟ್ಟೆಹಳ್ಳಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಕೆ.ಸಿ. ಮೋಹನಕುಮಾರ್ (46) ಅವರು ಅನಾರೋಗ್ಯದ ಕಾರಣ ದಿನಾಂಕ 10.08.2021ರ ಮಂಗಳವಾರ ರಾತ್ರಿ 10.30ಕ್ಕೆ ನಿಧನರಾದರು. ತಾಯಿ, ಪತ್ನಿ, ಇಬ್ಬರು ಮಕ್ಕಳು, ಸಹೋದರರು, ಸಹೋದರಿ ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ 11.08.2021ರ ಬುಧವಾರ ನಡೆಯಬೇಕಾಗಿದ್ದು ಕಾರಣಾಂತರದಿಂದ ದಿನಾಂಕ 12.08.2021ರ (ಇಂದು) ಗುರುವಾರ ಸಂಜೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನಡೆಯಲಿದೆ.

# 14ರಂದು ಮೆಗಾ ಲೋಕ್ ಅದಾಲತ್

**ಜಗಳೂರು**

ಜಗಳೂರು, ಆ.11- ಇದೇ ದಿನಾಂಕ 14 ರಂದು ಮೆಗಾ ಲೋಕ್ ಅದಾಲತ್ ನಡೆಯಲಿದೆ. ಒಂದು ಸಾವಿರಕ್ಕೂ ಹೆಚ್ಚು ಪ್ರಕರಣಗಳನ್ನು ರಾಜೀ ಮಾಡುವ ಗುರಿಯನ್ನು ಹೊಂದಿದ್ದು, ಪ್ರತಿಯೊಬ್ಬರು ಮೆಗಾ ಲೋಕ್ ಅದಾಲತ್ತನ್ನು ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

ಜಗಳೂರು ತಾಲ್ಲೂಕು ಕಾನೂನು ಸೇವಾ ಸಮಿತಿ ವತಿಯಿಂದ ನ್ಯಾಯಾಲಯದಲ್ಲಿ ಮೆಗಾ ಲೋಕ್ ಅದಾಲತ್ ಹಮ್ಮಿಕೊಳ್ಳಲಾಗಿದ್ದು, ಸದರಿ ಮೆಗಾ ಲೋಕ್ ಅದಾಲತ್ ಮೂಲಕ ಉಭಯ ಪಕ್ಷಗಾರರು ರಾಜಿಯಾಗಬಲ್ಲ ತಮ್ಮ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಸುಲಭವಾಗಿ ಮತ್ತು ಶೀಘ್ರವಾಗಿ ಯಾವುದೇ ಶುಲ್ಕವಿಲ್ಲದೇ ಇತ್ಯರ್ಥಪಡಿಸಿಕೊಳ್ಳಬಹುದು. ಪಕ್ಷಗಾರರು ನೇರವಾಗಿ ನ್ಯಾಯಾಲಯಕ್ಕೆ ಹಾಜರಾಗಿ ಅಥವಾ ವಿಡಿಯೋ ಕಾನ್ಫರೆನ್ಸ್, ವಿಡಿಯೋ ಕಾಲ್ ಮೂಲಕ ಭಾಗವಹಿಸಿ, ತಮ್ಮ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಬಹುದು.

ಕೋವಿಡ್-19 ಹಿನ್ನೆಲೆಯಲ್ಲಿ ಉಭಯ ಪಕ್ಷಗಾರರು ಮತ್ತು ಅವರ ಪರ ನ್ಯಾಯವಾದಿಗಳು ನ್ಯಾಯಾಲಯದಲ್ಲಿ ಬಾಕಿ ಇರುವ ರಾಜೀ ಆಗಬಲ್ಲ ಪ್ರಕರಣಗಳನ್ನು ಸ್ವ ಇಚ್ಛೆಯಿಂದ ತಾವಿರುವ ಸ್ಥಳದಿಂದಲೇ ವಿಡಿಯೋ ಕಾನ್ಫರೆನ್ಸ್ ಮೂಲಕ ರಾಜೀ ಮಾಡಿಕೊಂಡು ನೆಮ್ಮದಿಯ ಹಾಗೂ ಶಾಂತಿಯುತ ಜೀವನ ನಡೆಸಬೇಕೆಂದು ಸಾರ್ವಜನಿಕರಿಗೆ ತಿಳಿಸಲಾಗಿದೆ.

ಆಸಕ್ತ ಕಕ್ಷಿದಾರರು ಹೆಚ್ಚಿನ ಮಾಹಿತಿಗಾಗಿ ಇಮೇಲ್ tlscjagalur20@gmail.com, ಸಹಾಯವಾಣಿ ಸಂಖ್ಯೆ 9481690322 ಮೂಲಕ ತಾಲ್ಲೂಕು ಕಾನೂನು ಸೇವೆಗಳ ಸಮಿತಿಯ ಕಛೇರಿಯನ್ನು ಸಂಪರ್ಕಿಸಬಹುದು.

# ರೈತರ ಕಬ್ಬು ಬಾಕಿ ಪಾವತಿಸಿ

**ಸಕ್ಕರೆ ಸಚಿವ ಮುನೇನಕೊಪ್ಪ ಸೂಚನೆ**

ಬೆಂಗಳೂರು, ಆ. 11 - ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಸೌಲಭ್ಯಗಳನ್ನು ನೇಕಾ ರರಿಗೆ ತಲುಪಿಸಲು ಹಾಗೂ ಜವಳಿ ನೀತಿಯ ಅನುಷ್ಠಾನಕ್ಕೆ ಹಾಗೂ ರಾಜ್ಯದ ಜವಳಿಗೆ ಬ್ರ್ಯಾಂಡ್ ಕಲ್ಪಿಸಲು ಪ್ರಮುಖ ಆದ್ಯತೆ ನೀಡ ಬೇಕೆಂದು ಜವಳಿ ಮತ್ತು ಸಕ್ಕರೆ ಸಚಿವ ಶಂಕರ್ ಪಾಟೀಲ ಮುನೇನಕೊಪ್ಪ ಸೂಚಿಸಿದ್ದಾರೆ.

ಇಲಾಖಾ ಪ್ರಗತಿ ಪರೀಶಿಲನಾ ಸಭೆಯಲ್ಲಿ ಮಾತನಾಡಿದ ಅವರು, ರಾಷ್ಟ್ರದ ರೇಷ್ಮೆ ಉತ್ಪಾದನೆಯಲ್ಲಿ ಶೇ. 49ರಷ್ಟು ಹಾಗೂ ಉಣ್ಣೆ ಉತ್ಪಾದನೆಯಲ್ಲಿ ಶೇ. 12ರಷ್ಟು ಕರ್ನಾಟಕ ರಾಜ್ಯವು ಕೊಡುಗೆ ನೀಡುತ್ತಿದೆ. ಆದರೆ, ರಾಜ್ಯದ ಜವಳಿ ಇಲಾಖೆ ಹಿಂದುಳಿದಿರುವುದು ಶೋಚನೀಯ ಸ್ಥಿತಿ ಎಂದು ವಿಷಾದ ವ್ಯಕ್ತಪಡಿಸಿದ ಸಚಿವರು, ರಾಜ್ಯದ ಜವಳಿ ಉದ್ಯಮವನ್ನು ಪುನಶ್ಚೇತನಗೊಳಿಸಲು ಹೊಸ ಯೋಜನೆಗಳು, ನೀತಿ-ನಿರೂಪಣೆಗಳನ್ನು ರೂಪಿಸಿ ಜವಳಿ ನೀತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮೂಲಕ ಮಾದರಿ ರಾಜ್ಯವನ್ನಾಗಿ ಮಾಡಲು ಇಲಾಖೆಯ ಅಧಿಕಾರಿಗಳಿಗೆ ಅಗತ್ಯ ಕ್ರಮ ವಹಿಸಬೇಕೆಂದು ಸೂಚಿಸಿದರು.

ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆಗಾರ ರೈತರಿಗೆ ಬರಬೇಕಾದ ಬಾಕಿ ಹಣವನ್ನು ಸಮಯಕ್ಕೆ ಸರಿಯಾಗಿ ತಲುಪಿಸಲು ಮೊದಲ ಆದ್ಯತೆ ನೀಡಿ, ಸಕ್ಕರೆ ಕಾರ್ಖಾನೆಗಳ ಯಾವುದೇ ಲಾಬಿಗೆ ಮಣಿಯದಿರಿ ಎಂದು ಸಚಿವ ಮುನೇನಕೊಪ್ಪ ಅವರು ಅಧಿಕಾರಿಗಳಿಗೆ ಇದೇ ಸಂದರ್ಭದಲ್ಲಿ ಸೂಚಿಸಿದರು.

ಅಧಿಕಾರ ಸ್ವೀಕರಿಸಿ, ಮೊದಲ ಬಾರಿಗೆ ಇಲಾಖೆಯ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಸಚಿವರು, ದೇಶದಲ್ಲಿ ಸಕ್ಕರೆ ಉತ್ಪಾದನೆ ಮಾಡುವ ರಾಜ್ಯದಲ್ಲಿ ಕರ್ನಾಟಕ 3ನೇ ಸ್ಥಾನ ಪಡೆದಿದೆ. ಕಬ್ಬು ಬೆಳೆಗೆ ಪೂರಕ ನೈಸರ್ಗಿಕ ವಾತಾವರಣ ಮತ್ತು ಕಾರ್ಖಾನೆ ಸ್ಥಾಪನೆಗೆ ಪ್ರೋತ್ಸಾಹದಾಯಕ ಅಂಶಗಳಿರುವ ಕಾರಣ ಪ್ರತಿವರ್ಷ ಹೊಸ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗುತ್ತಿವೆ, ಇದು ಉತ್ತಮ ಬೆಳವಣಿಗೆ ಎಂದು ಹೇಳಿದರು.

ರೈತರು ಸರಬರಾಜು ಮಾಡಿದ ಕಬ್ಬಿಗೆ ಸಕ್ಕರೆ ಕಾರ್ಖಾನೆಗಳು ಸಮಯಕ್ಕೆ ಸರಿಯಾಗಿ ಹಣ ನೀಡುವಂತೆ ಮಾಡಲು ಸಕ್ಕರೆ ಕಾರ್ಖಾನೆಗಳ ಮೇಲೆ ರಾಜ್ಯ ಸರ್ಕಾರ ಬಿಗಿಯಾದ ಕಾನೂನು ರೂಪಿಸಬೇಕಾದ ಅವಶ್ಯಕತೆ ಇದೆ ಎಂಬ ಅಂಶ, ನನ್ನ ಗಮನಕ್ಕೆ ಬಂದಿದೆ ಎಂದವರು ಹೇಳಿದರು.

ಇಲಾಖೆಯ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿ ಮಹಾರಾಷ್ಟ್ರ ಮಾದರಿಯಲ್ಲಿ ನಿಯಮಗಳನ್ನು ರೂಪಿಸಿ, ಸರ್ಕಾರದಮಟ್ಟದಲ್ಲಿ ಈ ನಿಯಮಗಳು ಕಾರ್ಯಗತಗೊಳಿಸಲು ಕ್ರಮವಹಿಸಲಾಗುವುದು ಎಂದು ಸಚಿವರು ತಿಳಿಸಿದರು.

# ದೂಡಾ ಕಚೇರಿಯಲ್ಲೇ ಅರ್ಜಿ ಶುಲ್ಕ ಸ್ವೀಕೃತಿ

## ಪ್ರಾಧಿಕಾರದ ನಿವೇಶನ ಅರ್ಜಿಯ ಮೊದಲ ದಿನ ಗೊಂದಲದ ನಂತರ ನಿರ್ಧಾರ



> ಜನರು ಅಲೆದಾಡುವುದನ್ನು ತಪ್ಪಿಸಲು ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಲ್ಲೇ ಶುಲ್ಕ ಪಾವತಿಗೆ ವ್ಯವಸ್ಥೆ ಮಾಡಲಾಗಿದೆ. ಪ್ರಾಧಿಕಾರದಲ್ಲೇ ಅರ್ಜಿ ಪಡೆದ ನಂತರ, ಅಗತ್ಯ ದಾಖಲೆಗಳೊಂದಿಗೆ ಸ್ಥಳದಲ್ಲೇ ನೋಂದಣಿ ಶುಲ್ಕ ಪಾವತಿಸಬಹುದು.
> – ಬಿ.ಟಿ. ಕುಮಾರಸ್ವಾಮಿ, ಪ್ರಾಧಿಕಾರದ ಆಯುಕ್ತ

> ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಎರಡು ಕೌಂಟರ್‌ಗಳನ್ನು ತೆರೆಯಲಾಗುವುದು. ಅರ್ಜಿ ಶುಲ್ಕ ಕಟ್ಟಲು ಒಂದು ಹಾಗೂ ನೋಂದಣಿ ಶುಲ್ಕ ಕಟ್ಟಲು ಇನ್ನೊಂದು ಕೌಂಟರ್ ಕಾರ್ಯ ನಿರ್ವಹಿಸಲಿದೆ.
> – ಪ್ರಶಾಂತ ಕುಮಾರ್ ಕದಾಳೆ, ಶಾಖಾ ಪ್ರಬಂಧಕರು

ದಾವಣಗೆರೆ, ಆ. 11 - ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ವಸತಿ ಬಡಾವಣೆಯಲ್ಲಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಕರೆಯಲಾಗಿರುವ ಬೇಡಿಕೆ ಸಮೀಕ್ಷೆಗಾಗಿ ಅರ್ಜಿಗಳನ್ನು ಸಲ್ಲಿಸುವಲ್ಲಿ ಬುಧವಾರ ಗೊಂದಲ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ ಗುರುವಾರದಿಂದ ಪ್ರಾಧಿಕಾರದ ಆವರಣದಲ್ಲಿ ಶುಲ್ಕ ಪಾವತಿ ಹಾಗೂ ಅರ್ಜಿ ಸ್ವೀಕಾರಕ್ಕೆ ವ್ಯವಸ್ಥೆ ಮಾಡಲಾಗಿದೆ.

ನಗರದ ಪಿ.ಬಿ. ರಸ್ತೆಯಲ್ಲಿರುವ ಬ್ಯಾಂಕ್ ಆಫ್ ಬರೋಡ ಶಾಖೆಯಲ್ಲಿ ಅರ್ಜಿ ಶುಲ್ಕ ಹಾಗೂ ನೋಂದಣಿ ಶುಲ್ಕ ಸಲ್ಲಿಸಬೇಕೆಂದು ಪ್ರಾಧಿಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಆದರೆ, ಈ ಬಗ್ಗೆ ಸ್ಪಷ್ಟ ಸೂಚನೆ ಬಂದಿಲ್ಲ ಎಂದು ತಿಳಿಸಿದ್ದ ಬ್ಯಾಂಕ್ ಸಿಬ್ಬಂದಿ, ಕೇವಲ ಅರ್ಜಿ ಶುಲ್ಕ ಮಾತ್ರ ಕಟ್ಟಿಸಿಕೊಳ್ಳುತ್ತಿದ್ದರು. ಅಲ್ಲದೇ, ಅರ್ಜಿ ಶುಲ್ಕ ಕಟ್ಟಿದ ನಂತರ ಅರ್ಜಿಗಳನ್ನು ಪಡೆಯಲು ಮತ್ತೆ ಪ್ರಾಧಿಕಾರದ ಬಳಿ ತೆರಳಬೇಕು ಎಂದು ತಿಳಿಸಲಾಗಿತ್ತು. ಶುಲ್ಕ ಒಂದೆಡೆ, ಅರ್ಜಿ ಮತ್ತೊಂದೆಡೆ ಎಂಬುದು ತೊಡಕಾಗಿತ್ತು. ಇದರ ಜೊತೆಗೆ ಶುಲ್ಕ ಕಟ್ಟುವ ಫಾರಂಗಳೂ ಸಹ ಮಧ್ಯಾಹ್ನದ ವೇಳೆ ಖಾಲಿಯಾಗಿದ್ದವು.

ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿದ ಬ್ಯಾಂಕ್‌ನ ಶಾಖಾ ಪ್ರಬಂಧಕ ಪ್ರಶಾಂತ್ ಕುಮಾರ್ ಬಿ. ಕದಾಳೆ, ಪ್ರಾಧಿಕಾರದಿಂದ ಬಂದಿರುವ ಮಾಹಿತಿ ಅಸ್ಪಷ್ಟವಾಗಿದೆ. ಹೀಗಾಗಿ ಪ್ರಸಕ್ತ ಅರ್ಜಿ ಶುಲ್ಕವನ್ನು ಮಾತ್ರ ಪಾವತಿಸಿಕೊಳ್ಳಲಾಗುತ್ತಿದೆ. ನೋಂದಣಿ ಶುಲ್ಕವನ್ನು ಒಂದೆರಡು ದಿನಗಳ ನಂತರ ಪಾವತಿಸುವಂತೆ ತಿಳಿಸಲಾಗುತ್ತಿದೆ ಎಂದರು.

ಜನರ ಸಮಸ್ಯೆ ಕುರಿತು ದೂರುಗಳು ಬಂದ ನಂತರ ಆ ಬಗ್ಗೆ ಕ್ರಮ ತೆಗೆದುಕೊಂಡಿರುವ ಪ್ರಾಧಿಕಾರದ ಆಯುಕ್ತ ಬಿ.ಟಿ. ಕುಮಾರಸ್ವಾಮಿ, ಪ್ರಾಧಿಕಾರದಲ್ಲೇ ಶುಲ್ಕ ಪಾವತಿಗೆ ವ್ಯವಸ್ಥೆ ಮಾಡಿದ್ದಾರೆ.

ನಾಳೆ ಗುರುವಾರದಿಂದ ಪ್ರಾಧಿಕಾರದಲ್ಲೇ ಅರ್ಜಿ ಶುಲ್ಕ ಹಾಗೂ ನೋಂದಣಿ ಶುಲ್ಕ ಪಾವತಿಸಿಕೊಳ್ಳಲಾಗುವುದು. ಪ್ರಾಧಿಕಾರದಲ್ಲೇ ಶುಲ್ಕ ಕಟ್ಟಿಸಿಕೊಳ್ಳಲು ಕೌಂಟರ್ ತೆಗೆಯುವುದಾಗಿ ಬ್ಯಾಂಕ್ ಆಫ್ ಬರೋಡ ಅಧಿಕಾರಿಗಳು ಸಮ್ಮತಿಸಿದ್ದಾರೆ ಎಂದವರು ಪತ್ರಿಕೆಗೆ ತಿಳಿಸಿದ್ದಾರೆ.

ಜನರು ಅಲೆದಾಡುವುದನ್ನು ತಪ್ಪಿಸಲು ಈ ವ್ಯವಸ್ಥೆ ಮಾಡಲಾಗಿದೆ. ಪ್ರಾಧಿಕಾರದಲ್ಲಿ ಶುಲ್ಕ ಪಾವತಿಸಿ ಅರ್ಜಿ ಪಡೆದ ನಂತರ, ಅಗತ್ಯ ದಾಖಲೆಗಳೊಂದಿಗೆ ಸ್ಥಳದಲ್ಲೇ ನೋಂದಣಿ ಶುಲ್ಕ ಪಾವತಿಸಬಹುದು ಎಂದವರು ಹೇಳಿದ್ದಾರೆ. ಪ್ರಥಮ ದಿನವೇ ಎರಡೂವರೆ ಸಾವಿರ ಅರ್ಜಿಗಳನ್ನು ವಿತರಿಸಲಾಗಿದೆ.

# ಪ್ರತ್ಯೇಕ ಅಂಚೆ ಅಧೀಕ್ಷಕರ ಕಛೇರಿಗೆ ಮನವಿ



ದಾವಣಗೆರೆ, ಆ .11- ಜಿಲ್ಲೆಗೆ ಪ್ರತ್ಯೇಕ ವಿಭಾಗೀಯ ಅಂಚೆ ಕಛೇರಿ ತೆರೆಯುವಂತೆ ದೆಹಲಿಯಲ್ಲಿ ಸಂವಹನ ಇಲಾಖೆ ಸಚಿವ ಅಶ್ವಿನಿ ವೈಷ್ಣವ್‌ರವರನ್ನು ಡಾ.ಜಿ.ಎಂ.ಸಿದ್ದೇಶ್ವರ ಭೇಟಿಯಾಗಿ ಮನವಿ ಸಲ್ಲಿಸಿ ಚರ್ಚೆ ನಡೆಸಿದ್ದಾರೆ.

ದಾವಣಗೆರೆ ಜಿಲ್ಲೆ 1997 ರಲ್ಲಿ ರಚನೆಯಾದಾಗಿನಿಂದ ಚಿತ್ರದುರ್ಗ ವಿಭಾಗೀಯ ಅಂಚೆ ಅಧೀಕ್ಷಕರ ಕಛೇರಿ ವ್ಯಾಪ್ತಿಯಲ್ಲಿಯೇ ದಾವಣಗೆರೆ ಜಿಲ್ಲೆ ಕಾರ್ಯನಿರ್ವಹಿಸುತ್ತಾ ಬಂದಿದೆ. ಈ ಹಿಂದೆ ಹಲವಾರು ಬಾರಿ ಪ್ರತ್ಯೇಕ ಅಂಚೆ ಅಧೀಕ್ಷಕರ ಕಛೇರಿ ತೆರೆಯುವ ಬಗ್ಗೆ ಕೇಂದ್ರ ಸಂವಹನ ಸಚಿವಾಲಯದ ಮೇಲೆ ಸಂಸದ ಜಿ.ಎಂ.ಸಿದ್ದೇಶ್ವರ ಒತ್ತಡ ಹಾಕುತ್ತಿದ್ದರು.

ಇದಕ್ಕೆ ಉತ್ತರವಾಗಿ ಪ್ರಸ್ತುತ ಸಂವಹನ ಸಚಿವಾಲಯದ ಮುಂದೆ ಯಾವುದೇ ಹೊಸ ವಿಭಾಗೀಯ ಕಛೇರಿಗಳನ್ನು ತೆರೆಯುವ ಪ್ರಸ್ತಾವನೆ ಇಲ್ಲ ಎನ್ನುವ ಉತ್ತರವನ್ನೇ ಸಚಿವಾಲಯ ನೀಡುತ್ತಾ ಬಂದಿತ್ತು. ಈಗ ಕೇಂದ್ರ ಸಂವಹನ ಇಲಾಖೆಯು ಜೂನ್ ತಿಂಗಳಲ್ಲಿ ಸುತ್ತೋಲೆಯೊಂದನ್ನು ಹೊರಡಿಸಿ ಅವಶ್ಯವಿರುವ ಕಡೆ ಹೊಸ ವಿಭಾಗೀಯ ಅಂಚೆ ಕಛೇರಿ ತೆರೆಯಲು ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿದೆ.

ನೂತನ ಸುತ್ತೋಲೆ ಆಧಾರದ ಮೇಲೆ ಸೌತ್ ಕರ್ನಾಟಕ ರೀಜನ್ ಅಂಚೆ ಕಛೇರಿಯಿಂದ ಕೇಂದ್ರಕ್ಕೆ ದಾವಣಗೆರೆಗೆ ಪ್ರತ್ಯೇಕ ಅಂಚೆ ಅಧೀಕ್ಷಕರ ಕಛೇರಿ ತೆರೆಯುವ ಕುರಿತು ಪ್ರಸ್ತಾವನೆ ಸಲ್ಲಿಸಲು ಸಂಸದರು ನಿರ್ದೇಶನ ನೀಡಿದ್ದರು. ಪ್ರಸ್ತಾವನೆ ಸಲ್ಲಿಕೆಯಾದ ನಂತರ ಸಚಿವ ಅಶ್ವಿನಿ ವೈಷ್ಣವ್‌ರವರನ್ನು ಭೇಟಿಯಾಗಿ ದಾವಣಗೆರೆ ಯಾವ ಆಧಾರದ ಮೇಲೆ ಪ್ರತ್ಯೇಕ ವಿಭಾಗೀಯ ಅಂಚೆ ಕಛೇರಿ ಹೊಂದಲು ಅರ್ಹತೆ ಹೊಂದಿದೆ ಎಂಬುದನ್ನು ಸಚಿವರಿಗೆ ವಿವರಿಸಿದ್ದಾರೆ.

ಪ್ರಸ್ತುತ ಶಿವಮೊಗ್ಗ ವಿಭಾಗೀಯ ಅಂಚೆ ಕಛೇರಿ ವ್ಯಾಪ್ತಿಗೆ ಒಳಪಡುವ ಹೊನ್ನಾಳಿ, ನ್ಯಾಮತಿ, ಚನ್ನಗಿರಿ ತಾಲ್ಲೂಕುಗಳು ಹಾಗೂ ದಾವಣಗೆರೆ, ಹರಿಹರ, ಜಗಳೂರು ತಾಲ್ಲೂಕುಗಳನ್ನು ಸೇರಿಸಿಕೊಂಡು ಹೊಸ ವಿಭಾಗೀಯ ಕಛೇರಿ ಮಾಡಬಹುದು ಹಾಗೂ ತಾತ್ಕಾಲಿಕವಾಗಿ ಕಟ್ಟಡವನ್ನೂ ಸಹ ಒದಗಿಸಲು ಸಹಮತ ವ್ಯಕ್ತಪಡಿಸಲಾಗಿದೆ. ಯಾವುದೇ ಆರ್ಥಿಕ ಹೊರೆಯಾಗದಂತೆ ಪ್ರತ್ಯೇಕ ವಿಭಾಗೀಯ ಅಂಚೆ ಕಛೇರಿ ತೆರೆಯಲು ಪೂರಕವಾಗಿ ಎಲ್ಲಾ ಮಾಹಿತಿಯನ್ನು ಪ್ರಸ್ತಾವನೆಯಲ್ಲಿ ವಿವರಿಸಲಾಗಿದೆ.

ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ಕೆಲವು ಹುದ್ದೆಗಳನ್ನು ವಿಲೀನ ಮಾಡುವ ಮೂಲಕ ಆರ್ಥಿಕ ಹೊರೆ ನಿಭಾಯಿಸಬಹುದು ಎಂಬುದನ್ನು ಸಚಿವರ ಗಮನಕ್ಕೆ ತರಲಾಗಿದೆ ಎಂದು ಸಂಸದ ಸಿದ್ದೇಶ್ವರ ತಿಳಿಸಿದರು. ಒಟ್ಟಾರೆಯಾಗಿ ದಾವಣಗೆರೆಗೆ ಪ್ರತ್ಯೇಕ ವಿಭಾಗೀಯ ಅಂಚೆ ಕಛೇರಿ ತೆರೆಯಲು ಪೂರಕ ಅಂಶಗಳನ್ನು ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ. ಸಚಿವರು ದಾವಣಗೆರೆಗೆ ಪ್ರತ್ಯೇಕ ವಿಭಾಗೀಯ ಅಂಚೆ ಕಛೇರಿ ತೆರೆಯುವ ಕುರಿತು ಸಕಾರಾತ್ಮಕ ಉತ್ತರ ನೀಡಿದ್ದಾರೆ ಎಂದು ಸಂಸದರು ತಿಳಿಸಿದ್ದಾರೆ.

## 13 ಪಾಸಿಟಿವ್, 14 ಗುಣ

ದಾವಣಗೆರೆ, ಆ.11- ಜಿಲ್ಲೆಯಲ್ಲಿ ಬುಧವಾರ 13 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 14 ಜನರು ಗುಣಮುಖರಾಗಿದ್ದಾರೆಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 6, ಹರಿಹರ 2, ಹೊನ್ನಾಳಿ 2 ಹಾಗೂ ಚನ್ನಗಿರಿ ತಾಲ್ಲೂಕಿನ 3 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. 192 ಸಕ್ರಿಯ ಪ್ರಕರಣಗಳಿವೆ.

## 14 ರಂದು ನಗರದಲ್ಲಿ ಬೃಹತ್ ಲೋಕ್ ಅದಾಲತ್



ದಾವಣಗೆರೆ, ಆ.11- ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ನಿರ್ದೇಶನದ ಮೇರೆಗೆ ದಾವಣಗೆರೆ, ಹರಿಹರ, ಚನ್ನಗಿರಿ, ಹೊನ್ನಾಳಿ ಹಾಗೂ ಜಗಳೂರು ನ್ಯಾಯಾಲಯಗಳ ಆವರಣದಲ್ಲಿ ಇದೇ ದಿನಾಂಕ 14 ರಂದು ಮೆಗಾ ಲೋಕ್ ಅದಾಲತ್ ಆಯೋಜಿಸಲಾಗಿದೆ.

ವ್ಯಾಜ್ಯ ಪೂರ್ವ ಹಾಗೂ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಕಡಿಮೆ ಖರ್ಚಿನಲ್ಲಿ ಶೀಘ್ರವಾಗಿ ಪರಿಹರಿಸಿಕೊಳ್ಳಲು ಸಾರ್ವಜನಿಕರಿಗೆ ಮೆಗಾ ಲೋಕ್‌ಅದಾಲತ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ.

ರಾಜಿಯಾಗಬಲ್ಲ ಎಲ್ಲಾ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳು, ಮೋಟರ್ ವಾಹನ ಅಪಘಾತ ಪರಿಹಾರ ಪ್ರಕರಣಗಳು, ಚೆಕ್ ಅಮಾನ್ಯ ಪ್ರಕರಣಗಳು, ಭೂಸ್ವಾಧೀನ ಪರಿಹಾರ ಪ್ರಕ 'ರಣಗಳು, ಬ್ಯಾಂಕ್ ಸಾಲ ವಸೂಲಾತಿ ಪ್ರಕರಣಗಳು, ಎಂ.ಎಂ.ಡಿ.ಆರ್ ಕಾಯ್ದೆಯಡಿಯ ಪ್ರಕರಣಗಳನ್ನು ಮೆಗಾ ಲೋಕ್ ಅದಾ ಲತ್ ನಲ್ಲಿ ಪರಿಹರಿಸಿಕೊಳ್ಳಬಹುದು.

ಸಾರ್ವಜನಿಕರು ಮೆಗಾ ಲೋಕ್ ಅದಾಲತ್ ನ ಸಂಪೂರ್ಣ ಸದುಪಯೋಗ ಪಡೆದುಕೊಳ್ಳಬೇಕು ಹಾಗೂ ಹೆಚ್ಚಿನ ಮಾಹಿತಿಗಾಗಿ ದಾವಣಗೆರೆ ಹಳೆಯ ನ್ಯಾಯಾಲಯ ಸಂಕೀರ್ಣ ದಲ್ಲಿರುವ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ದಾವಣಗೆರೆ ಇವರನ್ನು ದೂ.ಸ:08192-296364, ತಾಲ್ಲೂಕು ಕಾನೂನು ಸೇವಾ ಸಮಿತಿಗಳಾದ ಹರಿಹರ 08192-296885, ಹೊನ್ನಾಳಿ 08188-251732, ಚನ್ನಗಿರಿ 08189-229195 ಮತ್ತು ಜಗಳೂರು 08196-227600 ಇವರನ್ನು ಸಂಪರ್ಕಿಸಬಹು ದೆಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾ ಧೀಶರಾದ ರಾಜೇಶ್ವರಿ ಎನ್. ಹೆಗಡೆ ಹಾಗೂ ಹಿರಿಯ ಸಿವಿಲ್ ನ್ಯಾಯಾಶರಾದ ಪ್ರವೀಣ್ ನಾಯಕ್ ತಿಳಿಸಿದ್ದಾರೆ.

## ಅಪರಾಧ : ಅಪ್ರಾಪ್ತರ ವಯಸ್ಸು 16ಕ್ಕೆ ಇಳಿಸದಿರಲು ಸಮಿತಿ ನಿರ್ಧಾರ

ನವದೆಹಲಿ, ಆ. 11 - ಗಂಭೀರ ಅಪರಾಧಗಳು ಸಂಭವಿಸಿದ ಸಂದರ್ಭದಲ್ಲಿ ಅಪ್ರಾಪ್ತರನ್ನು ಗುರುತಿಸುವ ವಯಸ್ಸನ್ನು ಈಗಿರುವ 18ರಿಂದ 16ಕ್ಕೆ ಇಳಿಸುವ ಪ್ರಸ್ತಾವನೆಯಲ್ಲಿ ಮುಂದುವರೆಯದಿರಲು ಸಂಸತ್ತಿನ ಸ್ಥಾಯಿ ಸಮಿತಿಯೊಂದು ನಿರ್ಧರಿಸಿದೆ.

ರಾಜ್ಯಸಭಾ ಸದಸ್ಯ ಹಾಗೂ ಕಾಂಗ್ರೆಸ್ ನಾಯಕ ಆನಂದ್ ಶರ್ಮ ನೇತೃತ್ವದ ಗೃಹ ವ್ಯವಹಾರಗಳ ಸ್ಥಾಯಿ ಸಮಿತಿ ಈ ವಿಷಯದ ಬಗ್ಗೆ ಪರಿಶೀಲನೆ ನಡೆಸುತ್ತಿತ್ತು. ಪೋಕ್ಸೋ ಕಾಯ್ದೆಯಡಿ ದಾಖಲಾಗುವ ದೊಡ್ಡ ಸಂಖ್ಯೆಯ ಪ್ರಕರಣಗಳಲ್ಲಿ ಕಾನೂನು ಸಂಘರ್ಷಕ್ಕೆ ಗುರಿಯಾಗುವವರ ವಯಸ್ಸು, ಕಾನೂನಿನಲ್ಲಿ ನಿಗದಿಯಾಗಿರುವುದಕ್ಕಿಂತ ಕಡಿಮೆ ಇದೆ ಎಂಬುದು ಸಮಿತಿಯ ಗಮನಕ್ಕೆ ಬಂದಿದೆ.

ಲೈಂಗಿಕ ಹಲ್ಲೆ ನಡೆಸುವ ಅಪ್ರಾಪ್ತರಿಗೆ ಚಿಕಿತ್ಸೆ ಹಾಗೂ ಆಪ್ತಸಮಾಲೋಚನೆ ನಡೆಸದೇ ಹೋದರೆ ಅವರು ಇನ್ನಷ್ಟು ಹೀನ ಅಪರಾಧಗಳನ್ನು ಎಸಗಬಹುದು ಎಂದು ಸಮಿತಿ ಹೇಳಿದೆ.

ಹೆಚ್ಚು ಅಪ್ರಾಪ್ತರು ಇಂತಹ ಅಪರಾಧಗಳಲ್ಲಿ ತೊಡಗದಂತೆ ತಡೆಯಬೇಕಿದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಇರುವ ವಯೋಮಿತಿಯನ್ನು 18ರಿಂದ 16ಕ್ಕೆ ಇಳಿಸಬೇಕು ಎಂದು ಸಮಿತಿ ತಿಳಿಸಿತ್ತು.

ಆದರೆ, ಕೇಂದ್ರ ಮಹಿಳಾ ಮತ್ತು ಮಕ್ಕಳ ಸಚಿವಾಲಯ ಕಾನೂನು ಸಂಘರ್ಷಕ್ಕೆ ಗುರಿಯಾದ ಮಕ್ಕಳನ್ನು ರಕ್ಷಿಸಲು ಬಾಲ ನ್ಯಾಯ ಕಾಯ್ದೆ ರೂಪಿಸಲಾಗಿದೆ. ಈ ಕಾಯ್ದೆಯಲ್ಲಿ ಸಣ್ಣ, ಗಂಭೀರ ಹಾಗೂ ಹೀನ ಕೃತ್ಯಗಳಿಗೆ ಸಂಬಂಧಿಸಿದಂತೆ ನಿಯಮಗಳಿವೆ ಎಂದು ತಿಳಿಸಿದೆ. ಆನಂತರ ಸಮಿತಿ ತನ್ನ ಪ್ರಸ್ತಾವನೆಯನ್ನು ಕೈ ಬಿಟ್ಟಿದೆ.

## ಎಟಿಎಂ ಕಾರ್ಡ್ ಬ್ಲಾಕ್ ಸರಿಪಡಿಸುವ ನೆಪದಲ್ಲಿ ವಂಚನೆ

ದಾವಣಗೆರೆ, ಆ.11- ಬ್ಯಾಂಕ್ ಅಧಿಕಾರಿ ಸೋಗಿನಲ್ಲಿ ಎಟಿಎಂ ಕಾರ್ಡ್ ಬ್ಲಾಕ್ ಆಗುವುದನ್ನು ಸರಿಪಡಿಸುವ ನೆಪದಲ್ಲಿ ಭತ್ತದ ವ್ಯಾಪಾರಿಗೆ ಆನ್‌ಲೈನ್ ಮುಖೇನ ಒಂದು ಲಕ್ಷ ರೂ. ವಂಚಿಸಿರುವ ಬಗ್ಗೆ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಹನುಮಾನ್ ಟ್ರೇಡರ್ಸ್‌ನ ಮಾಲೀಕರಾದ ಸ್ಥಳೀಯ ಸರಸ್ವತಿ ನಗರದ ಬಿ. ವೆಂಕಟೇಶ್ವರ ರಾವ್ ವಂಚನೆಗೊಳಗಾದ ವ್ಯಾಪಾರಿ. ಹದಡಿ ರಸ್ತೆಯ ಕೆನರಾ ಬ್ಯಾಂಕ್‌ನಲ್ಲಿ ಖಾತೆ ಹೊಂದಿದ್ದಾರೆ. ಅಪರಿಚಿತನು ದೂರವಾಣಿ ಮುಖಾಂತರ ಸಂಪರ್ಕಿಸಿ, ಬ್ಯಾಂಕ್ ಅಧಿಕಾರಿ ಎಂದು ಪರಿಚಿತಗೊಂಡು, ನಿಮ್ಮ ಎಟಿಎಂ ಕಾರ್ಡ್ ಬ್ಲಾಕ್ ಆಗುತ್ತಿದೆ. ಕಾರ್ಡ್ ರಿನೀವಲ್ ಮಾಡಲು ಕಾರ್ಡ್ ನಂಬರ್‌ಗಳನ್ನು ಕೇಳಿದ್ದು, ಈತನ ಮಾತನ್ನೇ ನಂಬಿದ ವೆಂಕಟೇಶ್ವರ ರಾವ್ ತಮ್ಮ ಬ್ಯಾಂಕ್ ಖಾತೆಗೆ ಸಂಬಂಧಿಸಿದಂತೆ ಮಾಹಿತಿ ನೀಡಿದ್ದಾರಲ್ಲದೇ, ಮೊಬೈಲ್‌ಗೆ ಬಂದ ಒಟಿಪಿ ನಂಬರ್‌ಗಳನ್ನು ಸಹ ತಿಳಿಸಿದ್ದಾರೆ. ನಂತರ ಇವರ ಖಾತೆಯಲ್ಲಿದ್ದ ಒಂದು ಲಕ್ಷ ರೂ. ಕಡಿತವಾಗಿದೆ. ಈ ಬಗ್ಗೆ ಬ್ಯಾಂಕ್‌ನಲ್ಲಿ ವಿಚಾರಿಸಿದಾಗ ತಾವು ಮೋಸ ಹೋಗಿರುವುದು ಬೆಳಕಿಗೆ ಬಂದಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

## ನಗರದಲ್ಲಿ ಇಂದು ಮದಕರಿ ನಾಯಕರ ಕಂಚಿನ ಪುತ್ಥಳಿಗೆ 23 ವರ್ಷಗಳ ಸಂಭ್ರಮ



ಶ್ರೀ ವೀರ ಮದಕರಿ ನಾಯಕ (ಹೊಂಡದ ಸರ್ಕಲ್) ವೃತ್ತದಲ್ಲಿರುವ 'ಗಂಡುಗಲಿ ವೀರ ಮದಕರಿ ನಾಯಕ' ಕಂಚಿನ ಪುತ್ಥಳಿ ಪ್ರತಿಷ್ಠಾಪಿಸಿ, ಇಂದಿಗೆ 23 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಮಧ್ಯಾಹ್ನ 12 ಗಂಟೆಗೆ ಜಿಲ್ಲಾ ನಾಯಕ ಸಮಾಜ ಮತ್ತು ನಾಯಕ ವಿದ್ಯಾರ್ಥಿ ನಿಲಯದ ಅಧ್ಯಕ್ಷ ಬಿ.ವೀರಣ್ಣ ಅವರು ಪುತ್ಥಳಿಗೆ ಮಾಲಾರ್ಪಣೆ ಮಾಡಲಿದ್ದಾರೆ. ನಂತರ ಅನ್ನ ಸಂತರ್ಪಣೆ ಏರ್ಪಡಿಸಿದ್ದಾರೆ. ಸಮಾಜದ ಮುಖಂಡರುಗಳಾದ ವಿನಾಯಕ ಪೈಲ್ವಾನ್, ಶ್ರೀನಿವಾಸ ದಾಸಕರಿಯಪ್ಪ, ಶಾಮನೂರು ಪ್ರವೀಣ್, ಹದಡಿ ಹಾಲಪ್ಪ, ಎನ್. ಎಂ. ಆಂಜನೇಯ ಗುರೂಜಿ ಮತ್ತಿತರು ಉಪಸ್ಥಿತರಿರುವರು ಎಂದು ನಾಯಕ ವಿದ್ಯಾರ್ಥಿ ನಿಲಯದ ನಿರ್ದೇಶಕ ಕೆ.ಆರ್. ಮಂಜುನಾಥ ಶ್ಯಾಗಲೆ ತಿಳಿಸಿದ್ದಾರೆ.

## ಎಸ್ಸೆಸ್ಸೆಲ್ಸಿ ಸೋಮೇಶ್ವರ ಶಾಲೆಗೆ ಶೇ. 100 ಫಲಿತಾಂಶ





ದಾವಣಗೆರೆ, ಆ. 11- ನಿಟುವಳ್ಳಿಯ ಕಾಲೇಜು ರಸ್ತೆಯಲ್ಲಿರುವ ಶ್ರೀ ಸೋಮೇಶ್ವರ ವಸತಿಯುತ ವಿದ್ಯಾಲಯಕ್ಕೆ ಎಸ್ಸೆಸ್ಸೆಲ್ಸಿ ಫಲಿತಾಂಶ ಶೇ. 100 ರಷ್ಟು ಲಭಿಸಿದ್ದು, 14 ವರ್ಷಗಳಿಂದ ಸತತವಾಗಿ ಶೇ. 100 ಫಲಿತಾಂಶ ಲಭಿಸಿರುವುದು ವಿಶೇಷವಾಗಿದೆ.

ಉನ್ನತ ಶ್ರೇಣಿಯಲ್ಲಿ 27, ಪ್ರಥಮ ದರ್ಜೆಯಲ್ಲಿ 39, ದ್ವಿತೀಯ ದರ್ಜೆಯಲ್ಲಿ 4 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಕು. ಋತು ಡಿ. ರಾವ್ 625ಕ್ಕೆ 613 ಅಂಕ ಪಡೆದು ಕನ್ನಡ 125, ಗಣಿತ ವಿಷಯಗಳಲ್ಲಿ 100ಕ್ಕೆ 100 ಅಂಕ ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದಿರುತ್ತಾಳೆ. ಕು. ಹೆಚ್.ಕೆ. ಸಾನಿಯಾ, ಸಮೃದ್ಧಿ ಎಸ್. ಇವರು 625ಕ್ಕೆ 611 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿರುತ್ತಾರೆ.

## ಒ.ಬಿ.ಸಿ. ಪಟ್ಟಿ : ಅಧಿಕಾರ


ನವದೆಹಲಿ, ಆ. 11 - ಇತರೆ ಹಿಂದುಳಿದ ವರ್ಗದವರ ಪಟ್ಟಿಯನ್ನು (ಒ.ಬಿ.ಸಿ.) ರಾಜ್ಯಗಳೇ ರೂಪಿಸುವ ಅಧಿಕಾರ ನೀಡಲು ಸಂವಿಧಾನಕ್ಕೆ ತಿದ್ದುಪಡಿ ತರುವ ಮಸೂದೆಗೆ ಸಂಸತ್ತು ಒಪ್ಪಿಗೆ ನೀಡಿದೆ.

ಸಂವಿಧಾನಕ್ಕೆ 127ನೇ ತಿದ್ದುಪಡಿ ಮಸೂದೆಗೆ ರಾಜ್ಯಸಭೆ ಒಪ್ಪಿಗೆ ನೀಡಿದೆ. ಸದನದಲ್ಲಿದ್ದ 187 ಸದಸ್ಯರು ಮಸೂದೆ ಪರವಾಗಿ ಮತ ಚಲಾಯಿಸಿದ್ದಾರೆ. ಯಾವುದೇ ಸದಸ್ಯರು ಮಸೂದೆ ವಿರುದ್ಧವಾಗಿ ಮತ ಚಲಾಯಿಸಿಲ್ಲ. ಲೋಕಸಭೆಯಲ್ಲಿ ನಿನ್ನೆ ಮಸೂದೆಗೆ ಒಪ್ಪಿಗೆ ನೀಡಲಾಗಿದೆ. ಪ್ರತಿಪಕ್ಷಗಳ ಸದಸ್ಯರು ಮಂಡಿಸಿದ ಕೆಲ ತಿದ್ದುಪಡಿಗಳನ್ನು ಧ್ವನಿಮತದ ಮೂಲಕ ತಿರಸ್ಕರಿಸಲಾಯಿತು.


ಮಹಿಳಾ ಸೇವಾ ಸಮಾಜ (ರಿ.)
ಶ್ರೀಮತಿ ಟಿ.ಎಂ. ಚಿನ್ನಮ್ಮ ಶ್ರೀ ಮಹೇಶ್ವರಯ್ಯ ಮೆಮೋರಿಯಲ್ ಪದವಿಪೂರ್ವ ಕಾಲೇಜು
(ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)
ಅಶೋಕ ರಸ್ತೆ, ದಾವಣಗೆರೆ-577 002. ಫೋನ್ : 233010




ದ್ವಿತೀಯ ಪಿಯುಸಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾದವರಿಗೆ ಆಡಳಿತ ಮಂಡಳಿ ಪ್ರಾಂಶುಪಾಲರು, ಅಧ್ಯಾಪಕ ವೃಂದದವರು ಅಭಿನಂದನೆಗಳನ್ನು ಸಲ್ಲಿಸಿರುತ್ತಾರೆ


ಕಾವ್ಯ ಪಿ.
516-86%
ಕಲಾ ವಿಭಾಗ


ಪೂಜಾ ಡಿ.
505-84%
ವಾಣಿಜ್ಯ ವಿಭಾಗ

2021-22ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಪ್ರಥಮ ಪಿಯುಸಿ ಕಲಾ ಮತ್ತು ವಾಣಿಜ್ಯ ತರಗತಿಗಳಿಗೆ ಪ್ರವೇಶ ಪ್ರಕಟಣೆ

ಸಂಯೋಜನೆಗಳು :
1) ಕಲಾ ವಿಭಾಗ - ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ (HEPS).
2) ಶಿಕ್ಷಣ ವಿಭಾಗ - ಇತಿಹಾಸ, ಶಿಕ್ಷಣ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ (HEPE)
3) ವಾಣಿಜ್ಯ ವಿಭಾಗ - ಅರ್ಥಶಾಸ್ತ್ರ, ವ್ಯವಹಾರ ಅಧ್ಯಯನ, ಲೆಕ್ಕಶಾಸ್ತ್ರ, ಕಂಪ್ಯೂಟರ್ ವಿಜ್ಞಾನ (ABEC).

ವಿಷಯ ಸಂಯೋಜನೆಗಳು :
ಭಾಗ -1 : ಕನ್ನಡ, ಇಂಗ್ಲಿಷ್, ಹಿಂದಿ. ಭಾಗ - 2 : ಐಚ್ಛಿಕ ವಿಷಯಗಳು

2020-21ನೇ ಸಾಲಿನ ದ್ವಿತೀಯ ಪಿಯುಸಿ 100% ಉತ್ತಮ ಫಲಿತಾಂಶ

ಕಡಿಮೆ ಶುಲ್ಕದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ

ಕಾಲೇಜಿನ ವೈಶಿಷ್ಟ್ಯತೆ :
✿ ಕಾಲೇಜ್ ನಗರದ ಮಧ್ಯ ಭಾಗದಲ್ಲಿದೆ. ಸುತ್ತಮುತ್ತ ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಬಸ್‌ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳಿಗೆ ಹತ್ತಿರದಲ್ಲಿರುತ್ತದೆ.
✿ ವಿಶಾಲವಾದ ಕಟ್ಟಡ ✿ ಸುಸಜ್ಜಿತವಾದ ಗ್ರಂಥಾಲಯ
✿ ಅನುಭವಿ ಉಪನ್ಯಾಸಕರಿಂದ ಬೋಧನೆ
✿ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು
✿ ಹೆಣ್ಣು ಮಕ್ಕಳಿಗೆ ವಿಶೇಷವಾದ ಭದ್ರತೆ ಹಾಗೂ ವೈಯಕ್ತಿಕ ಗಮನ
✿ ಮಾಸಿಕ ಪರೀಕ್ಷೆಗಳ ಮೂಲಕ ಪ್ರಗತಿಯೆಡೆಗೆ

ಪ್ರವೇಶದ ಅರ್ಜಿಗಳನ್ನು ಬೆಳಿಗ್ಗೆ 10.30 ರಿಂದ 2 ಗಂಟೆಯವರೆಗೆ ವಿತರಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :
ಶ್ರೀಮತಿ ಕೆ.ಕೆ. ಸುಶೀಲಮ್ಮ, ಅಧ್ಯಕ್ಷರು
ಶ್ರೀಮತಿ ಜಯ್ಯಮ್ಮ ನೀಲಗುಂದ, ಕಾರ್ಯದರ್ಶಿ
ಶ್ರೀ ಕೆ.ಎಸ್. ರವಿಕುಮಾರ್ ಪ್ರಾಚಾರ್ಯರು.



ಅಭಿನಂದನೆಗಳು



2020-2021ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 621 (ಶೇ.99.36) ಅಂಕಗಳನ್ನು ಗಳಿಸುವುದರ ಮೂಲಕ ವಿಶಿಷ್ಟ ದರ್ಜೆಯಲ್ಲಿ ತೇರ್ಗಡೆಯಾಗಿರುವ ಶ್ರೀ ಕೆ. ಲಕ್ಷ್ಮಣ್ (ಎಇಇ) ಮತ್ತು ಶ್ರೀಮತಿ ಹೆಚ್.ಎಸ್.ದೀಪಾ ದಂಪತಿ ಸುಪುತ್ರಿ ಹಾಗೂ ಸಿದ್ದಗಂಗಾ ಶಾಲೆಯ ವಿದ್ಯಾರ್ಥಿನಿ

ಕು. ವರ್ಷಿತ ಕೆ. ಎಲ್. ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

✦ ಅಜ್ಜಿ - ಅಜ್ಜ : ಶ್ರೀಮತಿ ಪ್ರೇಮ ಮತ್ತು ಹೆಚ್.ಜಿ.ಸಂಗಪ್ಪ
ಮಾಜಿ ಅಧ್ಯಕ್ಷರು ಮತ್ತು ಹಾಲಿ ನಿರ್ದೇಶಕರು, ಕನಕ ಪಟ್ಟಣ ಸಹಕಾರ ಬ್ಯಾಂಕ್, ದಾವಣಗೆರೆ.
✦ ಶ್ರೀಮತಿ ಅಮೃತಾ ಮತ್ತು ಹೆಚ್.ಎಸ್.ಪರಶುರಾಮ್
✦ ಶ್ರೀಮತಿ ಭೂಮಿಕಾ ಮತ್ತು ಹೆಚ್.ಎಸ್.ಮಹೇಶ್
✦ ಶ್ರೀಮತಿ ರಾಧಿಕಾ ಮತ್ತು ಹೆಚ್.ಎಸ್.ಶಿವಕುಮಾರ್
✦ ಶ್ರೀಮತಿ ರೂಪ ಮತ್ತು ಹೆಚ್.ಎಸ್.ನಾಗರಾಜ್



ಪುಟಾಣಿಗಳಾದ : ✦ ಕೆ.ಎಲ್.ಮನೋಜ್ ✦ ಹೆಚ್.ಪಿ. ಮೃತ್ಯುಂಜಯ ✦ ಹೆಚ್.ಪಿ. ಚೈತನ್ಯ ✦ ಶಿವಾನಿ ✦ ಪುನರ್ವಿಕಾ ✦ ರಾಘವ



Repco Home Finance We Value Your Dream
ರೆಪ್ಕೋ ಹೋಮ್ ಫೈನಾನ್ಸ್ ಲಿಮಿಟೆಡ್
CIN No. L65922TN2000TLC044655
ಫೋ : 08192-232836, ಮೊ : 9342440967, 9008090228, 7676823234, 9986297913
ಗೃಹ ಸಾಲ ಮೇಳ
ಸರಳ ವಿಧಾನದಲ್ಲಿ ಸಾಲ ಮಂಜೂರಾತಿ
ದಿ : 13-08-2021 ಶುಕ್ರವಾರ ಬೆಳಿಗ್ಗೆ 10 ರಿಂದ ಸಂಜೆ 5 ರ ವರೆಗೆ
ಸ್ಥಳ : ನಂ. 78-7ಎ, ಮೊದಲನೇ ಮಹಡಿ, ನೀಲ್‌ಕಮಲ್ ಫರ್ನಿಚರ್ ಶೋ ರೂಂ ಪಕ್ಕ ರೈತರಬೀದಿ, ಪಿ.ಜೆ. ಬಡಾವಣೆ, ಎ.ವಿ.ಕೆ. ಕಾಲೇಜ್ ರಸ್ತೆ, ದಾವಣಗೆರೆ - 577 002.
ಈ ಕೆಳಕಂಡ ಸಾಲಗಳಿಗೆ ಮಂಜೂರಾತಿ ನೀಡಲಾಗುವುದು :
★ ಖಾಲಿ ನಿವೇಶನ /ಮನೆ/ಫ್ಲಾಟ್ ಖರೀದಿಸಲು
★ ಮನೆ / ವಾಣಿಜ್ಯ ಕಟ್ಟಡ ಕಟ್ಟಲು
★ ಮನೆ ನವೀಕರಣಕ್ಕೆ
★ ಹೆಚ್ಚಿನ ಬಡ್ಡಿದರದ ಅಸ್ತಿತ್ವದಲ್ಲಿರುವ ಸಾಲವನ್ನು ಕಡಿಮೆ ಬಡ್ಡಿಗೆ ವರ್ಗಾಯಿಸಲು ಹಾಗೂ ಹೆಚ್ಚುವರಿ ಸಾಲ ಪಡೆಯಲು
★ ಅಡಮಾನ ಸಾಲ
ಹಬ್ಬದ ಪ್ರಯುಕ್ತ ವಿಶೇಷ ರಿಯಾಯಿತಿ
ಗೃಹ ಸಾಲ 7.50%* ರಿಂದ ಪ್ರಾರಂಭ
ಆಡಳಿತಾತ್ಮಕ ಶುಲ್ಕದಲ್ಲಿ ಸಂಪೂರ್ಣ ಮನ್ನಾ ಸಂಸ್ಕರಣ ಶುಲ್ಕದಲ್ಲಿ ಶೇ. 0.25 % ವಿಶೇಷ ರಿಯಾಯಿತಿ
ಆದಾಯ ಪತ್ರ ಹಾಗೂ ಆಸ್ತಿಯ ವಿವರಗಳೊಂದಿಗೆ ಭೇಟಿ ನೀಡಿ.

# ಗುರುಬಸಮ್ಮ ವಿ.ಚಿಗಟೇರಿ ಪ್ರೌಢಶಾಲೆಗೆ ಶೇ.100 ಫಲಿತಾಂಶ



ದಾವಣಗೆರೆ, ಆ.11 - ನಗರದ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಗುರುಬಸಮ್ಮ ವಿ. ಚಿಗಟೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ 2020-21ನೇ ವರ್ಷದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಲಭಿಸಿದೆ.

ಶಾಲೆಯಲ್ಲಿ ಒಟ್ಟು 93 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗುವುದರೊಂದಿಗೆ ಶಾಲೆಗೆ ಸತತ 11 ವರ್ಷಗಳಿಂದ ಶೇ.100 ಫಲಿತಾಂಶ ಲಭಿಸಿದಂತಾಗಿದೆ.

ಒಟ್ಟು 93 ವಿದ್ಯಾರ್ಥಿಗಳಲ್ಲಿ 7 ವಿದ್ಯಾರ್ಥಿಗಳು ವಿಶೇಷ ದರ್ಜೆಯಲ್ಲಿ, 68 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, 18 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಪಾಸಾಗುವುದರೊಂದಿಗೆ ಶಾಲೆಗೆ 'ಎ' ದರ್ಜೆಯ ಸ್ಥಾನಮಾನ ತಂದು ಕೊಟ್ಟಿದ್ದಾರೆ.

ಕು. ಜಯಂತ್ ಕೆ.ಜೆ. 609 ಅಂಕಗಳನ್ನು ಗಳಿಸುವುದರೊಂದಿಗೆ ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ, ಕು. ಆಶಾ ಹೆಚ್.ಬಿ 590 ಅಂಕಗಳನ್ನು ಗಳಿಸಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಶಾಲೆಗೆ ಉತ್ತಮ ಫಲಿತಾಂಶ ತಂದುಕೊಟ್ಟ ವಿದ್ಯಾರ್ಥಿಗಳಿಗೆ ಶಿಕ್ಷಕ ವೃಂದ ಹಾಗೂ ಆಡಳಿತ ಮಂಡಳಿಯವರು ಅಭಿನಂದಿಸಿದ್ದಾರೆ.

# ಎಸ್ಸೆಸ್ಸೆಲ್ಸಿ : ನಂದಗೋಕುಲ ಶಾಲೆಗೆ ಶೇ.100 ಫಲಿತಾಂಶ



ದಾವಣಗೆರೆ, ಆ.11- 2020-21ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಗರದ ನಂದಗೋಕುಲ ಆಂಗ್ಲ ಮಾಧ್ಯಮ ಪ್ರೌಢಶಾಲಾ ವಿಭಾಗಕ್ಕೆ ಶೇ.100 ರಷ್ಟು ಫಲಿತಾಂಶ ಲಭಿಸಿದೆ. ಪರೀಕ್ಷೆಗೆ ಹಾಜರಾಗಿದ್ದ ಎಲ್ಲಾ 41 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶಾಲೆಯ ಕೆ.ಬಿ. ಮಾನಸ 574 (ಶೇ.92) ಅಂಕಗಳನ್ನು ಗಳಿಸಿ, ಪ್ರಥಮ ಸ್ಥಾನ ಪಡೆದಿರುತ್ತಾರೆ.

ಎನ್.ಭರತ್ 561 (ಶೇ.90) ಅಂಕ ಗಳಿಸಿ, ದ್ವಿತೀಯ ಸ್ಥಾನ, ಡಿ.ಚಿನ್ಮಯಿ 555 (ಶೇ.88) ಅಂಕ ಗಳಿಸಿ, ತೃತೀಯ ಸ್ಥಾನ, ಬಿ.ಕೆ.ಶುಭಾ 552 (ಶೇ.88) ಅಂಕ ಗಳಿಸಿ, 4ನೇ ಸ್ಥಾನ ಹಾಗೂ ಆಯೇಷಾ ಸಿದ್ಧಿಕಾ 547 (ಶೇ.88) ಅಂಕ ಗಳಿಸುವ ಮೂಲಕ ಐದನೇಯ ಸ್ಥಾನ ಪಡೆದಿರುತ್ತಾರೆ.

# ಸಿದ್ಧಗಂಗಾ ಶಾಲೆಯಲ್ಲಿ 625 ಕ್ಕೆ 625 ಗಳಿಸಿದ ಇಬ್ಬರು ಬಾಲಕಿಯರು





ದಾವಣಗೆರೆ, ಆ.11 - 2020-21 ನೇ ಸಾಲಿನ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟ ವಾಗಿದ್ದು ಸಿದ್ಧಗಂಗಾ ಶಾಲೆಗೆ ಅದ್ವಿತೀಯ ಫಲಿತಾಂಶ ದೊರೆತಿದೆ. ಅನುಷಾ ಗ್ರೇಸ್.ಡಿ. ಚಿಂದವಾಳ್ ಮತ್ತು ವಿಜೇತ ಬಸವರಾಜು ಮುತ್ತಗಿ ಈ ಇಬ್ಬರು ಬಾಲಕಿಯರು 625ಕ್ಕೆ 625 ಅಂಕ ಗಳಿಸಿದ್ದಾರೆ.

ವರ್ಷಿತ ಕೆ.ಎಲ್. 621 ಪೂರ್ವಿಕಾ ಎಂ.ಎ. 619, ಸಿದ್ಧಾಂತ ಡಿ.ಜೆ. 615, ಪ್ರಣವ್ ಬಾಗೂರ್ 613, ಸಂಜನ 611, ಆಕಾಶ್ ಎಂ.ಎಸ್. 609, ಧೀರಜ್ ಎ.ವಿ. 607, ವಿಕಾಸ್ ಬಿ.ಎಸ್. 607, ಲಿಖಿತ 605, ತೇಜಸ್ ಹೆಚ್.ಎಸ್. 604, ತೇಜಸ್ ಎಸ್.ಎನ್. 604 ಮತ್ತು ನಿದಾ ಸುಲ್ತಾನಾ 600 ಅಂಕ ಗಳಿಸಿದ್ದಾರೆ.

ಅತ್ಯುತ್ತಮ ಶ್ರೇಣಿಯಲ್ಲಿ 90 ಮಕ್ಕಳು, ಪ್ರಥಮ ದರ್ಜೆಯಲ್ಲಿ 209 ಮಕ್ಕಳು, ದ್ವಿತೀಯ ದರ್ಜೆಯಲ್ಲಿ 19 ಮಕ್ಕಳು ಉತ್ತೀರ್ಣರಾಗಿದ್ದಾರೆ. ಕನ್ನಡದಲ್ಲಿ 8, ಇಂಗ್ಲಿಷ್ 18, ಹಿಂದಿ 32, ಗಣಿತ 4, ವಿಜ್ಞಾನ 4, ಸಮಾಜ 3 ಮಕ್ಕಳು ಆಯಾ ವಿಷಯಗಳಲ್ಲಿ 100 ಕ್ಕೆ 100 ಅಂಕ ಪಡೆದಿದ್ದಾರೆ.

6 ವಿಷಯಗಳನ್ನು 2 ದಿನದ ಪರೀಕ್ಷೆಗಳಲ್ಲಿ ಬರೆಯುವ ಒತ್ತಡವಿದ್ದರೂ ಮಕ್ಕಳು ಮಾನಸಿಕವಾಗಿ ಸಿದ್ಧರಾಗಿ ಪರೀಕ್ಷೆಯನ್ನು ಆತ್ಮಸ್ಥೈರ್ಯದಿಂದ ಎದುರಿಸಿ ಉತ್ತಮ ಫಲಿತಾಂಶ ನೀಡಿದ್ದಾರೆ. ಉತ್ತೀರ್ಣರಾದ ಎಲ್ಲಾ ಮಕ್ಕಳನ್ನು ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಹಾಗೂ ಆಡಳಿತ ಮಂಡಳಿಯವರು ಹೃತ್ಪೂರ್ವಕವಾಗಿ ಅಭಿನಂದಿಸಿದ್ದಾರೆ.

## ಓದುಗರ ಪತ್ರ

# ಶಿಕ್ಷಣ ಸಾಧನೆಯ ತೂಕ ನೀರ್ಗಲ್ಲ ಕಲ್ಲಿನೊಂದಿಗೆ !

ಮಾನ್ಯರೇ,

ಈ ಬಾರಿಯ ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ದಾವಣಗೆರೆ ಜಿಲ್ಲೆ ಮೊದಲ ಹತ್ತರ ಪಟ್ಟಿಯಲ್ಲಿ ಸ್ಥಾನ ಗಳಿಸಬೇಕು ಎಂಬುದು ಬಹಳ ಆಕಾಂಕ್ಷೆ. ಅನೇಕ ವರ್ಷಗಳ ಶ್ರಮ, ಅನೇಕಾನೇಕ ಶಿಕ್ಷಣಾಧಿಕಾರಿಗಳ ಹೇಳಿಕೆಗಳ ಕನಸಾಗಿತ್ತು.

**ಎಸ್ಸೆಸ್ಸೆಲ್ಸಿ ಫಲಿತಾಂಶ**

ಜಿಲ್ಲಾ ಶಿಕ್ಷಣಾಧಿಕಾರಿ ರಾಮಲಿಂಗಪ್ಪನವರಿಂದ ಹಿಡಿದು ಶ್ರೀಮತಿ ಪ್ರೇಮಾ ಮೇಡಂ, ........... ಅಧಿಕಾರಿಗಳಿಂದ ಕೊನೆಗೆ ಕೋವಿಡ್ ಕೊಡುಗೆರೂಪದಲ್ಲಿ ಫಲಿತಾಂಶ ದೊರಕೇಬಿಟ್ಟಿತು! ಪರಮೇಶ್ವರಪ್ಪನವರ ಆಡಳಿತದ ಸಮಯದಲ್ಲಿ. ಕನಸಿನ ಆಸೆ ಶ್ರಮವಿಲ್ಲದೆ ನೆರವೇರಿತು. ದಾವಣಗೆರೆ ಜಿಲ್ಲೆ ಮೊದಲ 10ರ ಪಟ್ಟಿಯಲ್ಲಿ ಬಂದಿದೆಯೆಂದು ಭಾವಿಸಿದ್ದೇನೆ!

ಶುಭ ಕೋರಲು ಯಾವ ಅಂಕೆಯ ಸ್ಥಾನದಲ್ಲಿದೆ ಎಂಬ ಪ್ರಶ್ನೆಗೆ ಪುನಃ ಅದೇ..ಅದೇ ಮಾಸ್ಕ್ ಧಾರಣೆಯ ಉತ್ತರ "ಕೊರೊನಾ".

ಬಯಸಿದ್ದು ಕಾಡಿ ಬೇಡಿಯಂತೂ ಅಲ್ಲ. ಬಯಸದೇ ಬಂದ ಭಾಗ್ಯ.! ದೇವರು ಕೊಡಲು ಹತ್ತಿದರೆ ಕೆನ್ನೆಗೆ ಭಾರಿಸಿಯೂ ಸಹ ಕೊಡುತ್ತಾನೆ ಎಂಬ ನಾಣ್ನುಡಿಯಂತೆ. ಜಗದ್ವಿಖ್ಯಾತ 100 ಮೀ.ವೇಗದ ಓಟಗಾರ ಉಸೇನ್ ಬೋಲ್ಟ್‌ನನ್ನು ಹಿಂದಿಕ್ಕದ ದೇಶವಲ್ಲವೇ ನಮ್ಮದು! ಕಂಬಳ ಕ್ರೀಡೆಯಲ್ಲಿ ಕೋಣ, ಎತ್ತುಗಳನ್ನು ಹಿಡಿದು ವೇಗವಾಗಿ ಓಡಿದ ಉಡುಪಿ ಜಿಲ್ಲೆಯ ಕಂಬಳ ಗದ್ದೆ ಓಟದ ಶ್ರೀನಿವಾಸ್ ಗೌಡ, ಶಿಶಾಂತ್ ಶೆಟ್ಟಿ ಹಾಗೇ ಇವರಿಗಿಂತ ವೇಗವಾಗಿ ಓಡಿದ ತಮಿಳುನಾಡಿನ ನಿಶಾಂತ್ ಶೆಟ್ಟಿ! ಬೋಲ್ಟ್‌ಗಿಂತ ವೇಗವಾಗಿ ಓಡಿದ ಓಟಗಾರರು ಎಂದು ನಾವು ಹೇಳಿಕೊಂಡೆವು. ಹಾಗೆಂದು ಹೇಳಿಕೊಂಡ ಮಾತ್ರಕ್ಕೆ ನಮಗೇನಾದರೂ ಒಲಂಪಿಕ್‌ನ ಪದಕ 100 ಮೀಟರ್‌ನಲ್ಲಿ ಲಭಿಸೀತೆ? ಅಸಾಧ್ಯ, ನಾವು ಹೇಳಿಕೊಂಡೆವು ಅಷ್ಟೇ. ಈ ವರ್ಷದ ಎಸ್.ಎಸ್.ಎಲ್.ಸಿ ಫಲಿತಾಂಶವೂ ಸಹ ವಿಶ್ವದ ವೇಗಿ ಉಸೇನ್ ಬೋಲ್ಟ್ ಮತ್ತು ಕಂಬಳ ಕ್ರೀಡೆಯ ಆಟಗಾರರ ಹೋಲಿಕೆಯಂತೆ ತಾಳೆಯಾಗುವುದೇ? ಲ.ಸಾ.ಅ-ಮ.ಸಾ.ಅ ಗೆ ಸಮವಾಗಲೇ ಇಲ್ಲ ಇಲ್ಲಿ! ಫಲಿತಾಂಶದ ಹಕ್ಕುದಾರರು, ಗೌರವದ ಸನ್ಮಾನಕ್ಕೆ ಭಾಜನರು ನಿಜ ಗುರು ವೃಂದವೇ? ಮಂತ್ರಿಯೇ? ಶಿ.ಅಧಿಕಾರಿಗಳೇ? ಸರ್ಕಾರವೇ?

ಅಥವಾ ಮತ್ತದೇ........ಕೊ.............ನವೇ!?

- ಕೆ.ಸಿರಾಜ್ ಅಹಮ್ಮದ್, ಸಂತೇಬೆನ್ನೂರು

# ಬಿಸಿಯೂಟ ತಯಾರಕರ ಬಾಕಿ ವೇತನ ಬಿಡುಗಡೆಗೆ ಆಗ್ರಹ



ದಾವಣಗೆರೆ, ಆ.11- ಜೂನ್, ಜುಲೈ ತಿಂಗಳ ಬಾಕಿ ವೇತನವನ್ನು ತಕ್ಷಣವೇ ಬಿಡುಗಡೆ ಮಾಡುವಂತೆ ಆಗ್ರಹಿಸಿ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಷನ್ ನೇತೃತ್ವದಲ್ಲಿ ನಗರದಲ್ಲಿ ಮೊನ್ನೆ ಬಿಸಿಯೂಟ ತಯಾರಕರು ಪ್ರತಿಭಟನಾ ಧರಣಿ ನಡೆಸಿದರು.

ತಾಲ್ಲೂಕು ಕಚೇರಿ ಎದುರು ಕೆಲ ಕಾಲ ಧರಣಿ ಹೂಡಿದ್ದ ಪ್ರತಿಭಟನಾಕಾರರು, ನಂತರ ತಹಶೀಲ್ದಾರ್ ಗಿರೀಶ್ ಅವರ ಮುಖಾಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಮನವಿ ಸಲ್ಲಿಸಿದರು.

ಫೆಡರೇಷನ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಆವರಗೆರೆ ಚಂದ್ರು ಮಾತನಾಡಿ, ರಾಜ್ಯದಲ್ಲಿ ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಅನುದಾನಿತ ಮತ್ತು ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಮುಖ್ಯ ಅಡುಗೆಯವರು ಮತ್ತು ಸಹಾಯಕ ಅಡುಗೆಯವರಿಗೆ ಕ್ರಮವಾಗಿ 2700 ರೂ. ಹಾಗೂ 2600 ರೂ. ಗೌರವ ಸಂಭಾವನೆ ನೀಡಲಾಗುತ್ತಿದೆ. ಆದರೆ, ಕೋವಿಡ್ ಸಂದರ್ಭದಲ್ಲಿ ಈ ಸಂಭಾವನೆ ಸಿಗದ ಕಾರಣಕ್ಕೆ ಈ ಮಹಿಳೆಯರು ಜೀವನ ನಡೆಸುವುದು ಕಷ್ಟಕರವಾಗಿದೆ ಎಂದು ಪ್ರತಿಭಟನಾಕಾರರು ಅಳಲಿಟ್ಟರು.

ಈ ಅತ್ಯಲ್ಪ ಸಂಭಾವನೆಯಲ್ಲಿ ಈ ದುಬಾರಿ ಜಗತ್ತಿನಲ್ಲಿ ಜೀವನ ನಡೆಸುವುದು ಸವಾಲಿನ ಕೆಲಸವಾಗಿದೆ. ಆದ್ದರಿಂದ ಗೌರವ ಧನ ಹೆಚ್ಚಿಸಬೇಕು. ಬಿಸಿಯೂಟ ತಯಾರಕರಿಗೆ ಜೂನ್, ಜುಲೈ ತಿಂಗಳ ಬಾಕಿ ಇರುವ ವೇತನವನ್ನು ಪಾವತಿಸಬೇಕು. ಅಲಹಾಬಾದ್ ಹೈಕೋರ್ಟ್ ಆದೇಶದಂತೆ ಬಿಸಿಯೂಟ ತಯಾರಿಕರಿಗೆ ಕನಿಷ್ಠ ವೇತನ ಜಾರಿಗೊಳಿಸಬೇಕು. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಇತರೆ ಅಸಂಘಟಿತ ಕಾರ್ಮಿಕರಿಗೆ ಪರಿಹಾರ ನೀಡಿದಂತೆ ಇವರಿಗೂ ತಲಾ 5 ಸಾವಿರ ರೂ. ಪರಿಹಾರ ನೀಡಬೇಕು ಎಂದು ಅವರು ಆಗ್ರಹಿಸಿದರು.

ಧರಣಿಯಲ್ಲಿ ಫೆಡರೇಷನ್‌ನ ಮುಖಂಡರಾದ ಸಿ. ರಮೇಶ್, ಪದ್ಮಾ, ಜ್ಯೋತಿಲಕ್ಷ್ಮಿ, ಇಂದ್ರಮ್ಮ, ಎಂ.ಎನ್. ಮಂಜುಳ, ಗೀತಾ, ಮಂಜಮ್ಮ, ಸಾಕಮ್ಮ, ರುದ್ರಮ್ಮ, ಪ್ರೇಮಲೀಲಾ, ಜಯಲಕ್ಷ್ಮಿ ಸೇರಿದಂತೆ, ಇತರರು ಭಾಗವಹಿಸಿದ್ದರು.

# ಪಕ್ಷಕ್ಕೆ ಶ್ರಮ ವಹಿಸಿದರೆ ತಕ್ಕ ಪ್ರತಿಫಲ ಸಾಧ್ಯ

## ಅಸಂಘಟಿತ ಕಾರ್ಮಿಕ ಕಾಂಗ್ರೆಸ್ ವಿಭಾಗದ ಪದಾಧಿಕಾರಿಗಳ ಸಭೆಯಲ್ಲಿ ದಿನೇಶ್ ಶೆಟ್ಟಿ



ದಾವಣಗೆರೆ, ಆ.11- ಕಾರ್ಯಕರ್ತರೇ ಕಾಂಗ್ರೆಸ್ ಪಕ್ಷದ ಶಕ್ತಿ. ಹಾಗಾಗಿ ಕಾರ್ಯಕರ್ತರು ಶ್ರಮ ವಹಿಸಿ ಸಂಘಟನೆ ಮಾಡಿದರೆ, ಅಧಿಕಾರದ ಅವಕಾಶ ಸಿಗಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅಭಿಪ್ರಾಯಪಟ್ಟಿದ್ದಾರೆ.

ನಗರದ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಇಂದು ಏರ್ಪಾಡಾಗಿದ್ದ ಅಸಂಘಟಿತ ಕಾರ್ಮಿಕ ಕಾಂಗ್ರೆಸ್ ವಿಭಾಗದ ಜಿಲ್ಲಾ ಪದಾಧಿಕಾರಿಗಳ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕರ್ತರು ಪಕ್ಷದ ಜೀವಾಳ. ಆದ್ದರಿಂದ ಬೇರೆ ಬೇರೆ ನಾಯಕರ ಹಿಂದೆ ಅಲೆಯುವುದನ್ನು ಬಿಟ್ಟು ತಾವೇ ಸ್ವತಃ ಬೇರು ಮಟ್ಟದಿಂದ ಪಕ್ಷವನ್ನು ಸಂಘಟಿಸಿದರೆ, ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ನೀವೇ ನಾಯಕರಾಗಬಹುದು ಎಂದು ಅವರು ಸಲಹೆ ನೀಡಿದರು.

ಅಸಂಘಟಿತ ಕಾರ್ಮಿಕ ಕಾಂಗ್ರೆಸ್ ವಿಭಾಗದ ಜಿಲ್ಲಾಧ್ಯಕ್ಷ ನಂಜಾ ನಾಯ್ಕ್, ಮುಖಂಡ ನಾಗಪ್ಪ ಅವರುಗಳು ಮಾತನಾಡಿದರು.

ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ನಾಗರಾಜ್ ಮಾತನಾಡಿ, ಕಾಂಗ್ರೆಸ್ ಪಕ್ಷವು ಶ್ರಮವಹಿಸಿ, ಪಕ್ಷಕ್ಕಾಗಿ ನಿಸ್ವಾರ್ಥ ಸೇವೆ ಸಲ್ಲಿಸುವವರನ್ನು ಗುರುತಿಸಿ, ಖಂಡಿತಾ ಉನ್ನತ ಸ್ಥಾನಮಾನ ನೀಡುತ್ತದೆ. ಇದಕ್ಕೆ ಉದಾಹರಣೆ ನಾನೇ ಇದ್ದೇನೆ. ನನಗೆ ಹಾಗೂ ನನ್ನ ಶ್ರೀಮತಿಗೆ ಒಟ್ಟು 4 ಬಾರಿ ಪಕ್ಷ ಅವಕಾಶ ಮಾಡಿಕೊಟ್ಟು ನನ್ನ ಮೇಲೆ ನಂಬಿಕೆ ಇಟ್ಟು ವಿವಿಧ ಹುದ್ದೆಗಳನ್ನು ನೀಡಿದೆ. ಇದಕ್ಕಾಗಿ ನಾನು ಯಾವಾಗಲೂ ಪಕ್ಷಕ್ಕೆ ಋಣಿಯಾಗಿರುವೆ ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಕಾರ್ಯಾಧ್ಯಕ್ಷ ಲಿಯಾಖತ್ ಅಲಿ, ಉಪಾಧ್ಯಕ್ಷ ಭಾಷಾ, ಪ್ರಧಾನ ಕಾರ್ಯದರ್ಶಿ ಹೆಚ್.ಹರೀಶ್, ಮೊಹಮ್ಮದ್ ಜಿಕ್ರಿಯಾ, ಕುಮಾರ್, ಶಶಿ, ಪ್ರಕಾಶ್ ಇನ್ನೂ ಮತ್ತಿತರರು ಭಾಗವಹಿಸಿದ್ದರು.

# ವಿದ್ಯಾರ್ಥಿಗೆ ಅನ್ಯಾಯ : ಆರೋಪ

ದಾವಣಗೆರೆ, ಆ.11- ಸಿಬಿಎಸ್ಇ ಹತ್ತನೇ ತರಗತಿ ಪರೀಕ್ಷೆಯಲ್ಲಿ ಚೆನ್ನಾಗಿ ಉತ್ತರಿಸಿದ್ದರೂ ಸಹ ನನ್ನ ಮಗ ಹಿತ್‌ಕುಮಾರ್ ಗೆ ಉದ್ದೇಶಪೂರ್ವಕವಾಗಿ ಕಡಿಮೆ ಅಂಕಗಳನ್ನು ನೀಡುವ ಮೂಲಕ ಜೈನ್ ವಿದ್ಯಾಲಯದ ಪ್ರಾಚಾರ್ಯರು ಅನ್ಯಾಯವೆಸಗಿದ್ದಾರೆಂದು ಪತ್ರಿಕಾಗೋಷ್ಠಿಯಲ್ಲಿ ವಿದ್ಯಾರ್ಥಿ ತಂದೆ ಸಂದೀಪ್ ಜೈನ್ ಆರೋಪಿಸಿದ್ದಾರೆ.

ಪ್ರಾಚಾರ್ಯರಾದ ಅನಿತಾ ರಜಪೂತ್ ಅವರು ಹಣದ ಆಮಿಷ, ನನ್ನ ಮಗನ ಮೇಲೆ ದ್ವೇಷದ ಭಾವನೆಯಿಂದ ಕಡಿಮೆ ಅಂಕಗಳನ್ನು ನೀಡಿರಬಹುದು ಎಂದು ಶಂಕೆ ವ್ಯಕ್ತಪಡಿಸಿದರು.

ಪ್ರಿಪರೇಟರಿಯಲ್ಲಿ ಶೇ.85 ರಿಂದ 90 ರಷ್ಟು ಅಂಕಗಳ ನಿರೀಕ್ಷೆಯಿದ್ದರೂ, ಕೇವಲ ಶೇ. 70 ರಷ್ಟು ಅಂಕಗಳನ್ನು ನೀಡಿ ಅನ್ಯಾಯ ಮಾಡಿದ್ದಾರೆ. ಈ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಸಲ್ಲಿಸಿರುವುದಾಗಿ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಸಂದೀಪ್ ಜೈನ್ ಪತ್ನಿ ಚಂದಾ, ಮಗ ಹಿತ್‌ಕುಮಾರ್ ಉಪಸ್ಥಿತರಿದ್ದರು.

# ಆರೋಪ ಸತ್ಯಕ್ಕೆ ದೂರ : ಪ್ರಾಂಶುಪಾಲರು


ದಾವಣಗೆರೆ, ಆ.11- ನಗರದ ಜೈನ್ ವಿದ್ಯಾಲಯದ 10 ನೇ ತರಗತಿ ವಿದ್ಯಾರ್ಥಿ (ಸಿಬಿಎಸ್ಇ) ಹಿತ್‌ಕುಮಾರ್ ಎಸ್. ಜೈನ್ ಅವರ ತಂದೆ ಸಂದೀಪ್ ಜೈನ್ ಅವರು ಮಾಡಿರುವ ಆರೋಪ ಸತ್ಯಕ್ಕೆ ದೂರವಾದ ಸಂಗತಿ ಎಂದು ಪ್ರಾಂಶುಪಾಲರಾದ ಅನಿತಾ ರಜಪೂತ್ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಶಾಲೆಗೆ ಕೆಟ್ಟ ಹೆಸರು ಬರಲಿ ಎನ್ನುವ ದುರುದ್ದೇಶದಿಂದ ಆರೋಪ ಮಾಡಿರುತ್ತಾರೆ. ಶಾಲೆಗೆ ಬಂದು ಸಂದೀಪ್ ಶಿಕ್ಷಕರಿಗೆ ಮಾನಸಿಕವಾಗಿ ಹಿಂಸಿಸಿರುತ್ತಾರೆ. ಹಿತ್‌ಕುಮಾರ್ ಕೂಡ ನಿಮ್ಮ ಹೆಸರು ಬರೆದು, ಶಾಲೆಯಲ್ಲಿಯೇ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕಿದ್ದಾನೆ. ಈ ಬಗ್ಗೆ ಸೂಕ್ತ ಕಾನೂನು ಕ್ರಮಕ್ಕೆ ಮುಂದಾಗುವುದಾಗಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಜೈನ್ ವಿದ್ಯಾಲಯದ ಅಧ್ಯಕ್ಷರಾದ ಹೆಚ್. ರಮೇಶ್ ಕುಮಾರ್ ಜೈನ್, ಕಾರ್ಯದರ್ಶಿ ಜೆ. ರಮೇಶ್ ಕುಮಾರ್, ಆಡಳಿತಾಧಿಕಾರಿ ಸೈಯದಾ ಖಾನ್, ಶಿಕ್ಷಕಿ ಬಿ.ಎಂ. ಶಿಲ್ಪಾ ಮತ್ತಿತರರಿದ್ದರು.

# ಮನೆಗಳ್ಳತನ: 2 ಪ್ರಕರಣ ಪತ್ತೆ

## 2.10 ಲಕ್ಷ ಮೌಲ್ಯದ ಚಿನ್ನಾಭರಣ, 27 ಸಾವಿರ ನಗದು ವಶ



ದಾವಣಗೆರೆ, ಆ.11- ಕೃಷಿಕರೋರ್ವರ ಮನೆಯ ಹೆಂಚನ್ನು ತೆಗೆದು ಒಳಗೆ ನುಗ್ಗಿ ಹಾಡಹಗಲೇ ಚಿನ್ನಾಭರಣ, ನಗದು ಕಳ್ಳತನ ಮಾಡಿದ್ದ ಕಳ್ಳನನ್ನು ಚನ್ನಗಿರಿ ಪೊಲೀಸರು ಬಂಧಿಸಿದ್ದಾರೆ. ಒಟ್ಟು ಎರಡು ಮನೆಗಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ ಆತನಿಂದ 2.10 ಲಕ್ಷ ಮೌಲ್ಯದ ಚಿನ್ನಾಭರಣ, 27 ಸಾವಿರ ನಗದು ವಶಪಡಿಸಿಕೊಂಡಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಅಜ್ಜಂಪುರ ತಾಲ್ಲೂಕಿನ ಶಿವನಿ ಗ್ರಾಮದ ದೊಂಬರ ಕಾಲೋನಿಯ ಕೂಲಿಕಾರ ಸ್ವಾಮಿ ಯಾನೆ ನವೀನ್ ಬಂಧಿತನು.

ಚನ್ನಗಿರಿ ತಾಲ್ಲೂಕಿನ ಪಾಂಡೋಮಟ್ಟಿ ಗ್ರಾಮದ ಕೆ.ಎಸ್. ನಾಗರಾಜ್ ಅವರು ಕಳೆದ ಇದೇ ಏ.4ರಂದು ಬೆಳಿಗ್ಗೆ ತಮ್ಮ ಮನೆಗೆ ಬೀಗ ಹಾಕಿಕೊಂಡು ತೋಟಕ್ಕೆ ಹೋಗಿದ್ದ ಸಂದರ್ಭದಲ್ಲಿ ಈ ಕೃತ್ಯ ನಡೆದಿದೆ.

ಚನ್ನಗಿರಿ ಪೊಲೀಸ್ ನಿರೀಕ್ಷಕ ಪಿ.ಬಿ. ಮಧು ನೇತೃತ್ವದಲ್ಲಿ ಪಿಎಸ್ಐ ರೂಪ್ಲಿಬಾಯಿ ಹಾಗೂ ಸಿಬ್ಬಂದಿಗಳಿದ್ದ ತಂಡವು ಆರೋಪಿಯನ್ನು ಬಂಧಿಸಿದೆ. ವಿಚಾರಣೆಗೆ ಪತ್ತೆ ಕಾರ್ಯದಲ್ಲಿ ಪೊಲೀಸ್ ಸಿಬ್ಬಂದಿಗಳಾದ ರುದ್ರೇಶ್, ಮಂಜುನಾಥ, ಪ್ರಸಾದ್, ರುದ್ರೇಶ್, ಜೆ. ಪರಶುರಾಮ, ರೇವಣಸಿದ್ದಪ್ಪ ಭಾಗವಹಿಸಿದ್ದರು.

# ನಗರಕ್ಕೆ ಇಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಉಮಾಶಂಕರ್

ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಇಂದು ನಗರಕ್ಕೆ ಆಗಮಿಸಲಿದ್ದಾರೆ.

ಮಧ್ಯಾಹ್ನ 12 ಗಂಟೆಗೆ ನಗರಕ್ಕೆ ಆಗಮಿಸುವ ಅವರು, ಮಧ್ಯಾಹ್ನ 12.30ಕ್ಕೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ಪಂಚಾಯತ್ ಸಮಸ್ಯೆಗಳ ಕುರಿತು ಚರ್ಚಿಸುವರು. ಸಂಜೆ 4 ಗಂಟೆಗೆ ಜಿಲ್ಲಾಧಿಕಾರಿಗಳೊಂದಿಗೆ ಜಿಲ್ಲಾ ಪ್ರಗತಿ ಪರಿಶೀಲನೆ ಹಾಗೂ ಕೋವಿಡ್-19 ಕುರಿತಂತೆ ಸಭೆ ನಡೆಸುವರು. ಸಂಜೆ 5 ಗಂಟೆಗೆ ಸ್ಮಾರ್ಟ್ ಸಿಟಿ ಕಚೇರಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು.

# ಮೊಬೈಲ್ ಅಂಗಡಿಗೆ ಕನ್ನ 10 ಮೊಬೈಲ್‌ಗಳ ಕಳವು

ದಾವಣಗೆರೆ, ಆ.11- ಮೊಬೈಲ್ ಅಂಗಡಿಗೆ ಕನ್ನ ಹಾಕಿರುವ ಕಳ್ಳರು, 1,39, 300 ರೂ. ಮೌಲ್ಯದ 10 ವಿವಿಧ ಕಂಪನಿಯ ಮೊಬೈಲ್‌ಗಳ ಜೊತೆಗೆ ಅಂಗಡಿಯಲ್ಲಿ ಅಳವಡಿಸಿದ್ದ ಡಿವಿಆರ್ ಮಾನಿಟರ್, ಸಿಸಿ ಕ್ಯಾಮರಾವನ್ನು ಕಳವು ಮಾಡಿರುವ ಘಟನೆ ಇಲ್ಲಿನ ಕೆ.ಟಿ.ಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಕೆ.ಬಿ. ಬಡಾವಣೆ 1ನೇ ಕ್ರಾಸ್‌ನಲ್ಲಿ ನಡೆದಿದೆ.

ಕೀಮಾ ರಾಮ್ ಅವರು ತಮ್ಮ ಮಾತಾಜಿ ಮೊಬೈಲ್ ಅಂಗಡಿಯಲ್ಲಿ ಮೊನ್ನೆ ಈ ಕೃತ್ಯ ನಡೆದಿದೆ. ಅಂಗಡಿಯ ವೆಂಟಿಲೇಟರ್ ಕಬ್ಬಿಣದ ರಾಡನ್ನು ಆಯುಧದಿಂದ ಕೊಯ್ದು ಪಿಓಪಿ ಮುರಿದು ಅಲ್ಲಿಂದ ಒಳಗೆ ಇಳಿದು ಮೊಬೈಲ್‌ಗಳನ್ನು ಕದ್ದಿದ್ದರು. ಕಳವಿನ ಬಗ್ಗೆ ಅಂಗಡಿಯಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾ ಪರಿಶೀಲಿಸಿದಾಗ, ಕಳ್ಳರು ಕಳ್ಳತನದ ಸಾಕ್ಷಿ ಸಿಗಬಾರದೆಂದು ನಾಲ್ಕು ಸಿಸಿ ಕ್ಯಾಮರಾಗಳು, ಒಂದು ಡಿವಿಆರ್ ಹಾಗೂ ಒಂದು ಮಾನಿಟರ್ ಕೂಡ ಕಳ್ಳತನ ಮಾಡಿ ಚಾಲಾಕಿತನ ತೋರಿದ್ದಾರೆ.

# ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾಗಿ ಶಿವರಾಜು

ದಾವಣಗೆರೆ, ಆ. 11- ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾಗಿ ಎಂ.ಶಿವರಾಜು ಅವರು ಇಂದು ಅಧಿಕಾರ ವಹಿಸಿಕೊಂಡಿದ್ದಾರೆ. ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಕೋಟಗುಡ್ಡದ ಸರ್ಕಾರಿ ಪ.ಪೂ. ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದ ಶಿವರಾಜು ಅವರಿಗೆ ಇಲಾಖೆಯು ಮುಂಬಡ್ತಿ ನೀಡಿ ದಾವಣಗೆರೆಗೆ ನಿಯುಕ್ತಿಗೊಳಿಸಿದೆ.

# ಕೆಆರ್‌ಎಸ್ ಕಾರ್ಯಕರ್ತರಿಗೆ ಜಾಮೀನು

ದಾವಣಗೆರೆ, ಆ.11- ಕೆ.ಆರ್.ಎಸ್. ಪಕ್ಷದ ಕಾರ್ಯಕರ್ತರ ವಿರುದ್ಧ ಸುಳ್ಳು ದೂರು ದಾಖಲಿಸುವ ಮೂಲಕ ಪೊಲೀಸರು ದೌರ್ಜನ್ಯ ಎಸಗಿದ್ದಾರೆ ಎಂದು ಪಕ್ಷದ ರಾಜ್ಯ ಯುವ ಘಟಕದ ಅಧ್ಯಕ್ಷ ರಘು ಜಾಣಗೆರೆ ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪೊಲೀಸರನ್ನು ಬ್ಲ್ಯಾಕ್‌ಮೇಲ್ ಮಾಡಿದ್ದಾರೆ ಎಂಬ ಆರೋಪ ಮಾಡಿ ಬಂಧಿಸಿರುವ ನಮ್ಮ ಪಕ್ಷದ ಮೂವರು ಕಾರ್ಯಕರ್ತರನ್ನು ಇಂದು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ಶ್ರೀ ದುರ್ಗಾ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ಸ್ ಸೈನ್ಸ್
3rd cross ಸಿದ್ದವೀರಪ್ಪ ಬಡಾವಣೆ, ದಾವಣಗೆರೆ-577004
(ಕರ್ನಾಟಕ ಸರ್ಕಾರ ಮತ್ತು ಪ್ಯಾರಾಮೆಡಿಕಲ್ ಬೋರ್ಡ್‌ನಿಂದ ಮಾನ್ಯತೆ ಪಡಿದಿದೆ)

2021-22 ನೇ ಸಾಲಿನ ಪ್ಯಾರಾಮೆಡಿಕಲ್ ಪ್ರವೇಶ ಪ್ರಕಟಣೆ

| ಕ್ರ.ಸಂ | ಕೋರ್ಸ್‌ಗಳು | ವಿದ್ಯಾರ್ಹತೆ | ಅವಧಿ |
|---|---|---|---|
| 01 | ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನೀಷಿಯನ್ (DMLT) | S.S.L.C<br>P.U.C ವಿಜ್ಞಾನ | 3 ವರ್ಷ<br>2 ವರ್ಷ |
| 02 | ಡಿಪ್ಲೋಮಾ ಇನ್ ಆಪರೇಷನ್ ಥಿಯೇಟರ್ & ಅನಸ್ತೇಶೀಯಾ ಟೆಕ್ನಾಲಜಿ (DOT & AT) | S.S.L.C<br>P.U.C ವಿಜ್ಞಾನ | 3 ವರ್ಷ<br>2 ವರ್ಷ |
| 03 | ಡಿಪ್ಲೋಮಾ ಇನ್ ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿ (DMIT) | S.S.L.C<br>P.U.C ವಿಜ್ಞಾನ | 3 ವರ್ಷ<br>2 ವರ್ಷ |

SC/ST/OBC ವಿದ್ಯಾರ್ಥಿಗಳಿಗೆ ಉಚಿತ ಹಾಸ್ಟೆಲ್ ಸೌಲಭ್ಯವಿದೆ.
SC/ST ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಸೌಲಭ್ಯವಿದೆ.
ರೈತರ ಮಕ್ಕಳಿಗೆ ಸರ್ಕಾರದ ವತಿಯಿಂದ ಸ್ಕಾಲರ್‌ಶಿಪ್ ಸೌಲಭ್ಯವಿದೆ.

ಉದ್ಯೋಗಾವಕಾಶಗಳು :-
♦ ಪ್ರಾಥಮಿಕ ಆರೋಗ್ಯ ಕೇಂದ್ರಗಳು ♦ ಖಾಸಗಿ ಆಸ್ಪತ್ರೆಗಳಲ್ಲಿ
♦ ತಾಲ್ಲೂಕು ಆರೋಗ್ಯ ಕೇಂದ್ರಗಳು ♦ ಮೆಡಿಕಲ್ ಕಾಲೇಜ್‌ಗಳಲ್ಲಿ
♦ ಜಿಲ್ಲಾ ಆಸ್ಪತ್ರೆ ♦ ಸರ್ಕಾರದ ಸಂಸ್ಥೆ (ಎನ್.ಜಿ.ಓ) ಗಳಲ್ಲಿ
♦ ನಗರಸಭೆ ಹಾಗೂ ಮಹಾನಗರ ಪಾಲಿಕೆಗಳಲ್ಲಿ ♦ ದೇಶ-ವಿದೇಶಗಳಲ್ಲಿ

ಮಾಹಿತಿಗಾಗಿ :- 98444 84763 , 98445 82726
82175 12907, 86600 44219

ಶಾಮನೂರು ಕಲ್ಲೇಶ್ ಜಿ.ಆರ್. ಅವರಿಂದ
ಹಾಲಿ ಮತ್ತು ನಿಕಟಪೂರ್ವ ಮುಖ್ಯಮಂತ್ರಿಗಳ ಭೇಟಿ





ದಾವಣಗೆರೆ ಜಿಲ್ಲೆಯ ಅಭಿವೃದ್ಧಿಗೆ ವಿಶೇಷ ಯೋಜನೆ ಅನುಷ್ಠಾನಗೊಳಿಸುವುದರ ಜೊತೆಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ದಾವಣಗೆರೆ ಜಿಲ್ಲೆಯ ಪರವಾಗಿ ಶಾಮನೂರು ಕಲ್ಲೇಶ್ ಜಿ.ಆರ್. ಅವರು ಬೆಂಗಳೂರಿನಲ್ಲಿ ಮನವಿ ಸಲ್ಲಿಸಿದರು.



ನಿಕಟಪೂರ್ವಕ ಮುಖ್ಯಮಂತ್ರಿಗಳು, ಕರ್ನಾಟಕ ರಾಜ್ಯದ ಕಣ್ಮಣಿ, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಇವರೆಲ್ಲರ ಆಶೀರ್ವಾದದ ಕರ್ನಾಟಕದ ರಾಜಾಹುಲಿ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪಾಜಿಯವರು ಎಂದೆಂದಿಗೂ ಅಜರಾಮರವಾಗಿರಲಿ.

ನನ್ನ ಆತ್ಮೀಯ ಮಿತ್ರರಾದ ಸನ್ಮಾನ್ಯ ಮುಖ್ಯಮಂತ್ರಿ
ಶ್ರೀ ಬಸವರಾಜ ಬೊಮ್ಮಾಯಿ ಅವರಿಗೆ ತುಂಬು ಹೃದಯದ ಅಭಿನಂದನೆಗಳು.
ದಾವಣಗೆರೆ ಜಿಲ್ಲಾ ಉಸ್ತುವಾರಿ ಹಾಗೂ ನಗರಾಭಿವೃದ್ಧಿ ಖಾತೆ ಸಚಿವರಾದ
ಶ್ರೀ ಭೈರತಿ ಬಸವರಾಜ್ ಅವರ ಅಧಿಕಾರವಧಿಯಲ್ಲಿ
ದಾವಣಗೆರೆ ಜಿಲ್ಲೆ ಸರ್ವತೋಮುಖ ಅಭಿವೃದ್ಧಿ ಕಾಣಲೆಂದು ಆಶಿಸುತ್ತೇನೆ.




ಶುಭ ಕೋರುವವರು :
✦ ಹೆಚ್.ಎಂ. ಜಗದೀಶ್ ಕ್ಲಾಸ್-1 ಕಂಟ್ರ್ಯಾಕ್ಟರ್ (ವಿದ್ಯುತ್)
✦ ಅಜ್ಜಂಪುರ ಶೆಟ್ರು ವಿಜಯಣ್ಣ
✦ ಬಳ್ಳಾರಿ ರೇವಣಸಿದ್ದಪ್ಪ ✦ ನಿಟುವಳ್ಳಿ ರೇವಣ್ಣ
✦ ತಿಪ್ಪೇಶ್ ✦ ಕರೇಗೌಡ್ರ ರಾಜು
✦ ಗೌಡ್ರು ಪ್ರಭಣ್ಣ ✦ ಕೆ.ಎಂ. ಚಂದ್ರಶೇಖರಪ್ಪ
✦ ಐನೇರ ಶಿವಣ್ಣ ✦ ಬೂದಿಹಾಳ್ ಲಿಂಗರಾಜ್
✦ ಕೃಷ್ಣೋಜಿರಾವ್ ✦ ನಿಟುವಳ್ಳಿ ಪ್ರಭು
✦ ಗುಂಟನೂರು ಜಯದೇವಪ್ಪ ಮಾಜಿ ಪ್ರಧಾನರು
✦ ಗುಂಟನೂರು ಜಗದೀಶ್
✦ ಗುಂಟನೂರು ಕಾರ್ತಿಕ್
✦ ಗುಂಟನೂರು ಯತೀಶ್
✦ ಗುಂಟನೂರು ಜಯಪ್ರಕಾಶ್
✦ ಗುಂಟನೂರು ಮಂಜು
✦ ಗುಂಟನೂರು ದರ್ಶನ್

ಶಾಮನೂರು ಕಲ್ಲೇಶ್ ಜಿ.ಆರ್.
ಬಿಜೆಪಿ ಮುಖಂಡರು
ರಾಷ್ಟ್ರೀಯ ಹಾಗೂ ರಾಜ್ಯ ನಾಯಕರುಗಳ ನಿರೀಕ್ಷೆಯಲ್ಲಿರುವ
ಮುಂದಿನ MLC ಅಥವಾ MLA ಪ್ರಬಲ ಅಭ್ಯರ್ಥಿ
ಮೊ. : 87229 99997, 87225 55557, 98456 02252

















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte